ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages - 24, ₹12

# ಸ್ವಾಭಿಮಾನಿ ಸಹಕಾರಿ

Volume -13
Issue - 05
May - 2016

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

## ದೇಶದ 10 ರಾಜ್ಯಗಳಲ್ಲಿ ಜಲಕ್ಷಾಮದಿಂದಾಗಿ ಬರ



ಜಲಸಂರಕ್ಷಣೆಯಲ್ಲಿ
ಜನತೆಯ ಪಾತ್ರ
ಅಗ್ರಮಾನ್ಯವಾಗಿದೆ

– ಪ್ರಧಾನಿ ನರೇಂದ್ರ ಮೋದಿ

ರಾಜ್ಯದ ಸೌಹಾರ್ದ ಸಹಕಾರಿಗಳು
ಬರಪೀಡಿತ ಪ್ರದೇಶದ ಜನರಿಗೆ,
ಜಾನುವಾರುಗಳಿಗೆ ನೆರವಾಗಲು ಮನವಿ

–ಗುರುನಾಥ ಜಾಂತಿಕರ



1 ಕಾರ್ಮಿಕರ ದಿನ



9 ಬಸವ ಜಯಂತಿ



11 ಶಂಕರ ಜಯಂತಿ



21 ಬುದ್ಧ ಪೂರ್ಣಿಮಾ

ಸೌಹಾರ್ದ ಸಹಕಾರಿಗಳ ಸಂಖ್ಯೆ : 3585 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 914



# ಸಹಕಾರಿ ಕ್ಷೇತ್ರದ ಮೂಲಕ ಮಹಿಳಾ ಸಬಲೀಕರಣ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕಾರ್ಮಿಕರ ದಿನಾಚರಣೆ, ಅಕ್ಷಯ ತೃತಿಯ, ಬಸವ ಜಯಂತಿ, ಶ್ರೀ ರಾಮಾನುಜಾಚಾರ್ಯ ಜಯಂತಿ, ಶಂಕರಾಚಾರ್ಯ ಜಯಂತಿ ಹಾಗೂ ಬುದ್ಧಪೂರ್ಣಿಮ ಶುಭಾಷಯಗಳು

ರಾಜ್ಯದ ಮಹಿಳಾ ಸಹಕಾರಿಗಳ ಆಡಳಿತ ಪರಿಣಿತಿಯನ್ನು ಅಭಿವೃದ್ಧಿಯನ್ನು ಹೆಚ್ಚಿಸುವುದಕ್ಕಾಗಿ ಸಂಯುಕ್ತ ಸಹಕಾರಿಯು ರಾಜ್ಯದಾದ್ಯಂತ ಹಲವಾರು ತರಬೇತಿಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಪ್ರತಿವರ್ಷ ಪ್ರತ್ಯೇಕವಾಗಿ ಮಹಿಳಾ ಸಹಕಾರಿಗಳ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳುತ್ತಿರುವುದು ತಮಗೆಲ್ಲ ತಿಳಿದ ವಿಷಯ.

2016–17ನೇ ಸಾಲಿನ ಎರಡನೆಯ ತರಬೇತಿ ಕಾರ್ಯಕ್ರಮ ಮಹಿಳಾ ಸಹಕಾರಿಗಳಿಗಾಗಿ ಹಮ್ಮಿಕೊಳ್ಳಲಾಗಿತ್ತು. ಈ ಬಾರಿಯ ರಾಜ್ಯದ 19 ಜಿಲ್ಲೆಗಳಿಂದ 33 ಸೌಹಾರ್ದ ಸಹಕಾರಿಗಳಿಂದ 69 ಮಹಿಳಾ ಸಹಕಾರಿಗಳು ಭಾಗವಹಿಸಿರುವುದು ವಿಶೇಷ. ರಾಜ್ಯದಲ್ಲಿ 161 ಮಹಿಳಾ ಸೌಹಾರ್ದ ಸಹಕಾರಿ ಸಂಸ್ಥೆಗಳಿವೆ. ಒಟ್ಟಾರೆ 3585 ಸೌಹಾರ್ದ ಸಹಕಾರಿಗಳಲ್ಲಿ 7000ಕ್ಕೂ ಹೆಚ್ಚು ಮಹಿಳೆಯರು ಸಹಕಾರಿ ಕ್ಷೇತ್ರದಲ್ಲಿ ನಿರ್ದೇಶಕರ ಸ್ಥಾನ ಅಲಂಕರಿಸಿದ್ದಾರೆ. 200ಕ್ಕೂ ಸೌಹಾರ್ದ ಸಹಕಾರಿಗಳಲ್ಲಿ ಮಹಿಳೆಯರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವುದು ಸ್ವಾಗತಾರ್ಹ ಹಾಗೂ ಶ್ಲಾಘನೀಯ.

ಮಹಿಳೆಯರಿಗಾಗಿ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಸರಕಾರ ಹಾಗೂ ಸ್ವಯಂ ಸೇವಾ ಸಂಘ ಸಂಸ್ಥೆಗಳು, ಸಹಕಾರ ಸಂಸ್ಥೆಗಳು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಇವುಗಳ ಪರಿಣಾಮವಾಗಿ ಮಹಿಳೆಯರು ಸುಶಿಕ್ಷಿತರಾಗುತ್ತಿದ್ದಾರೆ, ವ್ಯವಹಾರ ಜ್ಞಾನ ಸುಧಾರಣೆಯಾಗುತ್ತಿದೆ. 97ನೇ ಸಂವಿಧಾನ ತಿದ್ದುಪಡಿಯಿಂದಾಗಿ ಸಹಕಾರ ಕ್ಷೇತ್ರದಲ್ಲಿ ಮತ್ತು ರಾಜ್ಯಗಳ ಪಂಚಾಯಿತಿ ರಾಜ್ ವ್ಯವಸ್ಥೆಗಳಲ್ಲಿ ಮಹಿಳೆಯರಿಗಾಗಿ ಮೀಸಲಾತಿಯಿಂದಾಗಿ ದೇಶದ 6 ಲಕ್ಷ ಸಹಕಾರಿ ಸಂಸ್ಥೆಗಳಲ್ಲಿ 12 ಲಕ್ಷ ಮಹಿಳೆಯರು ಸಹಕಾರ ಸಂಸ್ಥೆಗಳ ನಿರ್ದೇಶಕರುಗಳಾಗಿದ್ದಾರೆ. ಸಾವಿರಾರು ಮಹಿಳೆಯರು ಅಧ್ಯಕ್ಷರಾಗಿದ್ದಾರೆ. ಸಹಕಾರಿ ಸಂಸ್ಥೆಗಳ ಆಡಳಿತ ಚುಕ್ಕಾಣಿ ಹಿಡಿದ್ದಾರೆ. ಈ ಎಲ್ಲ ಬೆಳವಣಿಗೆ ಸಹಕಾರಿ ಕ್ಷೇತ್ರದ ಮೂಲಕ ಮಹಿಳಾ ಸಬಲೀಕರಣಗಳ ಸಾಧ್ಯ ಎಂಬುದನ್ನು ಸಾಬೀತುಗೊಳಿಸಿದೆ.

ಸಹಕಾರಿ ಕ್ಷೇತ್ರದಲ್ಲಿ ಅನೇಕ ಮಹಿಳೆಯರು ಕೈಗಾರಿಕೆಗಳನ್ನು, ಗೃಹ ಉದ್ಯೋಗಗಳನ್ನು, ಸ್ವಯಂ ಉದ್ಯೋಗಗಳನ್ನು ಸ್ಥಾಪಿಸಿದ್ದಾರೆ. ಅನೇಕ ಮಹಿಳೆಯರಿಗೆ ಉದ್ಯೋಗ ಒದಗಿಸುವುದರ ಜೊತೆಗೆ ಮಹಿಳೆಯರಲ್ಲಿ ಆತ್ಮವಿಶ್ವಾಸ ಬೆಳೆಸುವುದಕ್ಕೆ ಕಾರಣರಾಗಿದ್ದಾರೆ. ಅನೇಕರು ಮಹಿಳಾ ಸಾಧಕೀಯರ ಸಾಲಿನಲ್ಲಿ ಗುರುತಿಸಿಕೊಳ್ಳುವಷ್ಟು ಬೆಳೆದಿದ್ದಾರೆ. ಇದೆಲ್ಲವೂ ಸಹಕಾರ ಕ್ಷೇತ್ರದಿಂದ ಸಾಧ್ಯವಾಗಿದೆ. ಅನೇಕರು ಗುರುತಿಸಿಕೊಳ್ಳದೇ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸಹ ಇದೆ. ಇವೆಲ್ಲವುಗಳನ್ನು ಗಮನಿಸಿದಾಗ ಮಹಿಳೆಯರು ಸಹಕಾರ ಕ್ಷೇತ್ರದಲ್ಲಿ ಕ್ರಿಯಾಶೀಲರಾಗುತ್ತಿದ್ದಾರೆ. ಈ ಪ್ರಗತಿ ಸಹಕಾರಿಗಳು ಹೆಮ್ಮೆ ಪಡುವ ಹಾಗೂ ಸಂತೋಷ ಪಡುವ ವಿಷಯ. ಆದರೆ, ಇಷ್ಟಕ್ಕೆ ಈ ಪ್ರಕ್ರಿಯೆ ನಿಲ್ಲಬಾರದು. ಸಹಕಾರ ಕ್ಷೇತ್ರದ ಮೂಲಕ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಮತ್ತು ಮಹಿಳೆಯರ ಕ್ರಿಯಾಶೀಲತೆಯಿಂದ ಸಹಕಾರ ಕ್ಷೇತ್ರದ ಅಭಿವೃದ್ಧಿ ಒಂದಕ್ಕೊಂದು ಪೂರಕವಾಗಿ ನಿರಂತರವಾಗಿ ಸಾಗಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.

ಸಹಕಾರ ಸಂಸ್ಥೆಗಳು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಇವುಗಳ ಪರಿಣಾಮವಾಗಿ ಮಹಿಳೆಯರು ಸುಶಿಕ್ಷಿತರಾಗುತ್ತಿದ್ದಾರೆ, ವ್ಯವಹಾರ ಜ್ಞಾನ ಸುಧಾರಣೆಯಾಗುತ್ತಿದೆ. 97ನೇ ಸಂವಿಧಾನ ತಿದ್ದುಪಡಿಯಿಂದಾಗಿ ಸಹಕಾರ ಕ್ಷೇತ್ರದಲ್ಲಿ ಮತ್ತು ರಾಜ್ಯಗಳ ಪಂಚಾಯಿತಿ ರಾಜ್ ವ್ಯವಸ್ಥೆಗಳಲ್ಲಿ ಮಹಿಳೆಯರಿಗಾಗಿ ಮೀಸಲಾತಿಯಿಂದಾಗಿ ದೇಶದ 6 ಲಕ್ಷ ಸಹಕಾರಿ ಸಂಸ್ಥೆಗಳಲ್ಲಿ 12 ಲಕ್ಷ ಮಹಿಳೆಯರು ಸಹಕಾರ ಸಂಸ್ಥೆಗಳ ನಿರ್ದೇಶಕರುಗಳಾಗಿದ್ದಾರೆ.

**ಗುರುನಾಥ ಜಾಂತಿಕರ,** ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಒಳ ಪುಟಗಳಲ್ಲಿ . . .

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಒಂದು ಮನವಿ ........ 4
ದೇಶದ 10 ರಾಜ್ಯಗಳಲ್ಲಿ ಜಲಕ್ಷಾಮದಿಂದಾಗಿ ಬರ ........ 5
ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ ..... 6
ಮಹಿಳಾ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ......... 8
ಯಾದಗಿರಿ ಶ್ರೀಶ್ರೀ ಶ್ರೀ ಜಗದ್ಗುರು ಪಂಚಾಚಾರ್ಯ ಸೌಹಾರ್ದ ಸಹಕಾರಿ ನಿ., ಸಹಕಾರಿಯ ಉದ್ಘಾಟನೆ ........ 10
ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ........ 12
ನಿಮ್ಮ ಪ್ರಶ್ನೆ ನಮ್ಮ ಉತ್ತರ ........ 14
ಸಹಕಾರಿ ನಾಯಕತ್ವ ಸವಾಲುಗಳು, ಅವಕಾಶಗಳು, ಉತ್ತರದಾಯಿತ್ವ ಮತ್ತು ಗುಣಮಟ್ಟ ನಿರ್ವಹಣೆ.......16

# ಸಂಪಾದಕೀಯ

## ಸಹಕಾರ ಕ್ಷೇತ್ರದ ಪ್ರಸ್ತುತತೆ

ಬ್ರಿಟೀಷ್ ಸರಕಾರ ಈ ದೇಶದ ರೈತರ ಆರ್ಥಿಕ ಸಂಕಷ್ಟಗಳಿಗೆ ನೆರವಾಗಲು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಹೆಚ್ಚಿನ ಆತಂಕಗಳು ಬಾರದಂತೆ ತಡೆಯಲು 1904ರಲ್ಲಿ ಸಹಕಾರ ಕಾಯ್ದೆ ಜಾರಿಗೆ ತರುವುದರ ಮೂಲಕ ಸಹಕಾರ ಚಳುವಳಿ ಹುಟ್ಟು ಹಾಕಿರುವುದು ಇತಿಹಾಸ. ಸಹಕಾರ ಕ್ಷೇತ್ರದ ಬೆಳವಣಿಗೆ ಸ್ವಾತಂತ್ರ್ಯಪೂರ್ವದಲ್ಲಿ ತೃಪ್ತಿಕರವಾಗಿರಲಿಲ್ಲ. ಸ್ವಾತಂತ್ರ್ಯಾನಂತರ ಅಧ್ಯಯನ ವರದಿ ಆಧರಿಸಿ, ಸರಕಾರ ಆಸಕ್ತಿ ವಹಿಸಿ, ಪಾಲುಗಾರಿಕೆಯಿಂದ ಸಹಕಾರ ಕ್ಷೇತ್ರವನ್ನು ಪೋಷಿಸುತ್ತಾ ಬಂದಿದೆ. ಕೆಲವು ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ, ಉತ್ತಮವಾಗಿ ಬೆಳೆದಿವೆ. 1991ರಲ್ಲಿ ನೂತನ ಆರ್ಥಿಕ ನೀತಿ ಜಾರಿಗೆ ಬಂದ ನಂತರ ಸರಕಾರದ ನೆರವು ನಿಧಾನವಾಗಿ ಕಡಿಮೆಯಾಗುತ್ತಿದ್ದು, ಸರಕಾರದ ಪೋಷಣೆಯ ಪ್ರಮಾಣವು ಕಡಿಮೆಯಾಗುತ್ತಾ ಬಂದಿದೆ. ಸಹಕಾರ ಕ್ಷೇತ್ರದಲ್ಲಿ ಸರಕಾರಗಳ ಆಸಕ್ತಿಯೂ ಕಡಿಮೆಯಾಗಿದೆ.

ಸಹಕಾರ ಸಂಸ್ಥೆಗಳಿಗೆ ಪ್ರಸಕ್ತ ಅರ್ಥ ವ್ಯವಸ್ಥೆಯಲ್ಲಿ ಖಾಸಗಿಯವರೊಡನೆ, ಕಂಪನಿಗಳೊಂದಿಗೆ, ಸರಕಾರಿ ಸ್ವಾಮ್ಯದ ಸಂಸ್ಥೆಗಳೊಡನೆ ಪೈಪೋಟಿ ಅನಿವಾರ್ಯವಾಗಿದೆ. ದೇಶದ ಸಹಕಾರಿ ಅರ್ಥವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಕೊಡುಗೆ ನೀಡುತ್ತಾ ಬಂದಿದೆಯಾದರೂ, ಸರಕಾರದ ಅನೇಕ ಯೋಜನೆಗಳ ಜಾರಿಗೆ ಸಾಧನವಾಗಿವೆಯಾದರೂ, ಸಹಕಾರ ಕ್ಷೇತ್ರದ ಪ್ರಸ್ತುತತೆಯನ್ನು ಪ್ರಶ್ನಿಸುವ ಧ್ವನಿಗಳು ಸಹಕಾರಿಗಳಲ್ಲಿ ಆತಂಕ ಮೂಡಿಸುವುದು ಸಹಜ.

ಸಹಕಾರ ಕ್ಷೇತ್ರ ವಿಫಲವಾಗಿದೆ, ಆದರೆ, ಅದು ಸಫಲವಾಗಲೇಬೇಕು ಎಂದು ವರದಿಗಳ ಆಧಾರವಿದೆ. ಸಹಕಾರ ಕ್ಷೇತ್ರದ ಶತಮಾನದ ಸಾಧನೆ ಇದೆ. ಸರಕಾರದ ಯೋಜನೆಗಳ ಅನುಷ್ಠಾನಕ್ಕೆ ಸಹಕಾರ ಕ್ಷೇತ್ರವೇ ಒಂದು ಪ್ರಮುಖ ಸಾಧನವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಮತ್ತು ಇದಕ್ಕೆ ಪರ್ಯಾಯ ವ್ಯವಸ್ಥೆ ಇಲ್ಲದೇ ಇರುವುದರಿಂದ ಸಹಕಾರ ಕ್ಷೇತ್ರ ನಿತ್ಯ ಪ್ರಸ್ತುತ.

ಸಹಕಾರ ಕ್ಷೇತ್ರದ ಪ್ರಸ್ತುತತೆಯನ್ನು ಪ್ರಶ್ನಿಸುವ ಜನರಿಗೆ ಸಹಕಾರ ಕ್ಷೇತ್ರದ ಎಲ್ಲಾ ಹಂತದ ಕಾರ್ಯನಿರ್ವಹಣೆಯಲ್ಲಿ ಸದಸ್ಯರು ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ತಮ್ಮ ಅಸ್ತಿತ್ವವನ್ನು ತೋರ್ಪಡಿಸುವ ನಿಟ್ಟಿನಲ್ಲಿ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸುವುದು ಅಗತ್ಯ. ಈ ಬಗ್ಗೆ ಸಹಕಾರಿಗಳು ಚಿಂತನೆ ನಡೆಸಬೇಕು, ಕ್ರಿಯಾಶೀಲರಾಗಬೇಕು, ಸಹಕಾರ ಕ್ಷೇತ್ರ ಬೆಳೆಯಬೇಕು. ಸಹಕಾರಿಗಳಿಗೆ ಇದೊಂದು ಸವಾಲು. ಈ ಸವಾಲನ್ನು ಸ್ವೀಕರಿಸಿ, ಕಾರ್ಯನಿರ್ವಹಿಸುವುದು ಇಂದಿನ ಅಗತ್ಯತೆ. ■



# ಬೆಳಕು (ಜ್ಞಾನ) ನಿಶ್ಚಿಂತತೆಯ ದಾರಿ

ಶ್ರೀ ಬಸವೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

'ದೇವ' ಇದೊಂದು ಶಬ್ಧ, ಬಹಳ ಪವಿತ್ರವಾದ ಶಬ್ಧ. ಈ ಶಬ್ಧದ ಅರ್ಥ ಬಹು ಸುಂದರ. ದೇವ ಶಬ್ಧದ ಅರ್ಥ 'ಬೆಳಕು'. ಯಾವುದು ಎಲ್ಲಾ ವಸ್ತುಗಳನ್ನು ತೋರಿಸುತ್ತದೆಯೋ ಅದು ಬೆಳಕು. ನಮಗೆ ಬರೀ ಕಣ್ಣು ಇದ್ದರೆ ಸಾಲದು, ಮನಸ್ಸಿದ್ದರೆ ಸಾಲದು, ಬೆಳಕು ಬೇಕು. ಆ ಬೆಳಕು ನೇರವಾಗಿ ಕಾಣದಿದ್ದರೂ ಎಲ್ಲೆಡೆ ಇದೆ. ಅದು ಇಲ್ಲದಿದ್ದರೆ ಜಗತ್ತು ಕತ್ತಲಲ್ಲಿರುತ್ತದೆ. ಅದು ಎಲ್ಲಾ ವಸ್ತುಗಳನ್ನು ತೋರಿಸುತ್ತದೆ. ಆದರೆ ತನ್ನನ್ನು ತೋರಿಸುವುದಿಲ್ಲ. ತಾನು ಮಾತ್ರ ಮೌನವಾಗಿರುತ್ತದೆ. 'ಬೆಳಕು' ಎಂಥ ಶಬ್ಧವನ್ನು ಕೊಟ್ಟಿದ್ದಾರೆ ಋಷಿಗಳು, ಯಾವುದು ಬೆಳಗುತ್ತದೆ ಅದು ದೇವರು. ಹೊರಗೂ ಒಂದು ಬೆಳಕು ಇದೆ, ಒಳಗೂ ಒಂದು ಬೆಳಕು ಇದೆ. ಒಳಗಿರುವುದು ಜ್ಞಾನ ಬೆಳಕು. ಹೊರಗಿನದು ಭೌತ ಬೆಳಕು. ಎರಡೂ ಕೂಡಿದರೆ ಜಗತ್ತು ಸುಂದರವಾಗಿ ಕಾಣುತ್ತದೆ. ಒಂದು ಇದ್ದು, ಇನ್ನೊಂದು ಇಲ್ಲದಿದ್ದರೆ ಉಪಯೋಗವಿಲ್ಲ. ಬೆಳಕೇ ದೇವರು ಎಂದ ಮೇಲೆ ದೇವರು ಇದ್ದಾನೆಯೇ? ಎಂಬ ಪ್ರಶ್ನೆಯೇ ಇಲ್ಲ.

ದೇವರು ಇದ್ದಾನೋ? ಇಲ್ಲವೋ? ಎನ್ನುವ ಪ್ರಶ್ನೆಗೂ ಮುಂಚೆ ದೇವರು ಎಂದರೇನು? ಎಂಬುದನ್ನು ತಿಳಿದುಕೊಳ್ಳಬೇಕು. ದೇವರು ಎಂದರೆ ವ್ಯಕ್ತಿಯಲ್ಲ... ಬೆಳಕು. ಆ ಬೆಳಕಿನಲ್ಲಿಯೇ ಬದುಕುತ್ತೇವೆ. ಎಂಥ ಅದ್ಭುತ ಬೆಳಕು? ಅದು ಹೊಳೆಯುತ್ತಿರುವುದರಿಂದ ಸೂರ್ಯ ಬೆಳಕು ನೀಡುತ್ತಿದೆ, ನಕ್ಷತ್ರ ಬೆಳಗುತ್ತಿದೆ, ಚಂದ್ರ ಬೆಳಗುತ್ತಿದೆ, ಮನಸ್ಸಿನ ಬೆಳಕೂ ಬೆಳಗುತ್ತಿದೆ. ಅದು 'ಬೆಳಕಿನ ಬೆಳಕು' Light of light. ಒಳಗೆಲ್ಲಾ ಬೆಳಕು, ಹೊರಗೆಲ್ಲಾ ಬೆಳಕು, ಇದಕ್ಕೆ ಇತಿಮಿತಿ ಇಲ್ಲ. ಮನುಷ್ಯ ದೇವರು ಇಲ್ಲ ಎನ್ನಬಹುದು. ಆದರೆ, ಬೆಳಕು ಇಲ್ಲ ಎಂದು ಹೇಳುವುದಿಲ್ಲ. ಬೆಳಕೇ ದೇವರು, ಅದೇ ಆತ್ಮ, ಇಂಥ ದೇವರನ್ನು ಪ್ರೀತಿಸಬೇಕು. ಇದು ತಿಳಿಯಿತು ಅಂದರೆ ಬೆಳಕಿದೆ. ಅದು ಬೆಳಕಿನ ಪ್ರೇಮ, ಅದು ಅಪ್ರತಿಮ ಪರಮಪ್ರೇಮ. ಇಂಥ ಪ್ರೇಮ ಮನುಷ್ಯನ ಮನಸ್ಸನ್ನು ಪ್ರವೇಶಿಸಿದರೆ ಬದುಕು ಬದಲಾಗುತ್ತದೆ, ಸುಂದರವಾಗುತ್ತದೆ. ಸುಂದರ ಹೂದೋಟದಲ್ಲಿ ನಿಂತಾಗ ಬೇಡ ಅಂದರೂ ಮನಸ್ಸು ಆನಂದ ಪಡುತ್ತದೆ. ಅಲ್ಲಿರುವ ವಸ್ತು ನಮ್ಮ ಮೇಲೆ ಪ್ರಭಾವ ಬೀರುತ್ತದೆ. ಮನಸ್ಸು ಸುಂದರವಾದದ್ದನ್ನು ನೋಡ್ತು, ಕೇಳ್ತು, ಯೋಚನೆ ಮಾಡ್ತು, ಮನಸ್ಸು ರೂಪಗೊಳ್ಳುತ್ತಾ ಹೋಗುತ್ತದೆ. ಅದು ನಮ್ಮನ್ನು ರೂಪಿಸುತ್ತದೆ. ಹೀಗಾಗಿ ಬೆಳಕನ್ನು ಪ್ರೀತಿಸಬೇಕು. ಒಳಗಿನ ಹೊರಗಿನ ಬೆಳಕನ್ನು ಗಾಢವಾಗಿ ಪ್ರೀತಿಸಬೇಕು. ಅದು ಪರಮಪ್ರೇಮ. ಅದಕ್ಕೆ ರೂಪ ಇಲ್ಲ. ವಸ್ತುಗಳಿಗೆ ರೂಪವಿದೆ, ಬೆಳಕಿಗೆ ರೂಪ ಇಲ್ಲ. ದೇವರಿಗೆ ರೂಪ ಕೊಟ್ಟು ಮೂರ್ತಿ ಮಾಡಿದೆವೋ... ಅದು ಮಿತಿ. ದೇವರಿಗೆ ಮಿತಿ ಇಲ್ಲ. ಇಂಥ ಬೆಳಕನ್ನು ಪ್ರೀತಿಸಬೇಕು.

ಜೀವನ ವಿಚಿತ್ರವಿಚಿತ್ರವಾಗಿ ಸಾಗುತ್ತಿರುತ್ತದೆ. ಸುಖ ದುಃಖ, ಸಿಹಿ ಕಹಿ, ಸಂತೋಷ ಬೇಸರ ಯಾವುದು ಶಾಶ್ವತವಲ್ಲ. ಅದರ ಬಗ್ಗೆ ಹೆಚ್ಚು ಚಿಂತಿಸಬಾರದು. ಮನುಷ್ಯ ನಿಶ್ಚಿಂತತೆಯಿಂದ ಇರಲು ಕಲಿಯಬೇಕು. ಮನುಷ್ಯ ನಿಶ್ಚಿಂತನಾಗಬೇಕಾದರೆ ನಿತ್ಯವಾದ ಪರಮಸತ್ಯವನ್ನು ಪ್ರೀತಿಸಬೇಕು. ಯಾವುದು ನಮ್ಮ ಕೈ ಬಿಡುವುದಿಲ್ಲ ಅದನ್ನು ಪ್ರೀತಿಸಬೇಕು. ಅದು ಬೆಳಕು. ಅದು ದೇವರು. ದೇವರನ್ನು ಪ್ರೀತಿಸಿದರೆ, ಸತ್ಯವನ್ನು ಪ್ರೀತಿಸಿದರೆ, ಬೆಳಕನ್ನು ಪ್ರೀತಿಸಿದರೆ ನಿಶ್ಚಿಂತನಾಗಿರಲು ಸಾಧ್ಯ. ಬದುಕು ನೆಮ್ಮದಿಯಿಂದ ಸಾಗಿಸಲು ಸಾಧ್ಯ.

## ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ ನೇತೃತ್ವದಲ್ಲಿ ಕೇಂದ್ರ ನೇರ ತೆರಿಗೆ ಆಯೋಗದ ಅಧ್ಯಕ್ಷ ಶ್ರೀ ಅತುಲೇಶ್ ಜಿಂದಾಲ್ ಭೇಟಿ ಹಾಗೂ ಮನವಿ ಸಲ್ಲಿಕೆ. ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯ ತೊಂದರೆಗಳನ್ನು ತಪ್ಪಿಸಲು ಹಾಗೂ ಸಹಕಾರಿ ಸಂಸ್ಥೆಗಳಿಗೆ ಅಧಾಯ ತೆರಿಗೆ ಅನ್ವಯಿಸುವುದಿಲ್ಲದಿರುವ ಬಗ್ಗೆ ಸೂಕ್ತ ನಿರ್ದೇಶನ ನೀಡಲು ಮನವಿ.



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ ನೇತೃತ್ವದಲ್ಲಿ ಶ್ರೀ ಬಸವರಾಜ ಪಾಟೀಲ್, ರಾಜ್ಯ ಸಭಾ ಸದಸ್ಯರು ಕಲಬುರಗಿ, ಶ್ರೀ ಭಗವಂತ ಖೂಬಾ, ಲೋಕಸಭಾ ಸದಸ್ಯರು, ಬೀದರ, ಶ್ರೀ ಮಹಾಲಿಂಗ ಪಂಢರಿ ಸಹಕಾರ ಭಾರತಿ ಶ್ರೀ ಮಾರ್ತಾಂಡ ಶಾಸ್ತ್ರಿ ಸಹಕಾರಿ ಧುರೀಣ, ಕಲಬುರಗಿ ಹಾಗೂ ಶ್ರೀ ಶರಣಗೌಡ ಪಾಟೀಲ್ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿ ಇವರು, ಕೇಂದ್ರ ನೇರ ತೆರಿಗೆ ಆಯೋಗದ ಅಧ್ಯಕ್ಷ ಶ್ರೀ ಅತುಲೇಶ್ ಜಿಂದಾಲರವರನ್ನು ಭೇಟಿಮಾಡಿ ಸಹಕಾರ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ವಿವರ ನೀಡಿ ಉಚ್ಚ ನ್ಯಾಯಾಲಯದ ತೀರ್ಪುಗಳು ಸಹಕಾರಿ ಸಂಸ್ಥೆಗಳ ಪರವಾಗಿ ಇದ್ದಾಗ್ಯೂ ಸಹ ತೆರಿಗೆ ಅಧಿಕಾರಿಗಳು ಸಹಕಾರಿ ಸಂಸ್ಥೆಗಳಿಗೆ ತೆರಿಗೆ ನೀಡುವ ಬಗ್ಗೆ ನೋಟೀಸಗಳನ್ನು ಕಳುಹಿಸಿ ಕಿರಿಕಿರಿ ಮಾಡುತ್ತಿದ್ದಾರೆ. ಇದನ್ನು ಸೂಕ್ತ ಕ್ರಮವನ್ನು ತಕ್ಷಣವೆ ಕೈಗೊಳ್ಳಬೇಕು ಎಂದು ವಿನಂತಿಸಿದರು. ಮನವಿಯನ್ನು ಸ್ವೀಕರಿಸಿದ ಸಿಬಿಡಿಟಿ ಅಧ್ಯಕ್ಷ ಶ್ರೀ ಅತುಲೇಶ್ ಜಿಂದಾಲರವರು ತಕ್ಷಣವೆ ಸೂಕ್ತ ಕ್ರಮವಿಡುವುದಾಗಿ ಭರವಸೆ ನೀಡಿದ್ದಾರೆ.

# ದೇಶದ 10 ರಾಜ್ಯಗಳಲ್ಲಿ ಜಲಕ್ಷಾಮದಿಂದಾಗಿ ಬರ

## ಬರದ ಕಾರಣ ಕೃಷ್ಣಾ ನದಿಯಲ್ಲಿ ಮುಳುಗಿದ್ದ ಗ್ರಾಮಗಳು ಈಗ ಕಾಣುತ್ತಿವೆ



**ನವದೆಹಲಿ :** ಭಾರತದಲ್ಲಿ ಈ ಬಾರಿ ಭೀಕರ ಬರಗಾಲ ಬಂದಿದೆ. ಹೆಚ್ಚುತ್ತಿರುವ ಬಿಸಿಲ ಧಗೆ, ಜಲಕ್ಷಾಮದಿಂದಾಗಿ ಕುಡಿಯವ ನೀರಿಲ್ಲದೆ ಜನರು ತತ್ತರಿಸಿ ಹೋಗಿದ್ದಾರೆ. ದೇಶದ 33 ಕೋಟಿ ಜನರಿಗೆ ತಟ್ಟಿರುವ, ಸದ್ಯದ ಬರ ಸ್ಥಿತಿಯಿಂದಾಗಿ ಪರಿಸ್ಥಿತಿ ಕಠಿಣವಾಗಿದೆ. ಕೇಂದ್ರ ಸರ್ಕಾರ, ಹತ್ತು ರಾಜ್ಯಗಳನ್ನು ಬರ ಪೀಡಿತವಾಗಿವೆ ಎಂದು ಹೇಳಿದೆ. ಕರ್ನಾಟಕದಲ್ಲಿ 3.1 ಕೋಟಿ, ಮಹಾರಾಷ್ಟ್ರದಲ್ಲಿ 3.69 ಕೋಟಿ, ಒಡಿಶಾದಲ್ಲಿ 1.67 ಕೋಟಿ, ಆಂಧ್ರದಲ್ಲಿ 2.35 ಕೋಟಿ, ತೆಲಂಗಾಣದಲ್ಲಿ 1.78 ಕೋಟಿ ಮತ್ತು ಉತ್ತರ ಪ್ರದೇಶದಲ್ಲಿ 9.9 ಕೋಟಿ ಜನ ಬರ ಪೀಡಿತರಾಗಿದ್ದಾರೆ. ಅಲ್ಲದೇ, ಗುಜರಾತ್, ಬಿಹಾರ್ ಮತ್ತು ಹರ್ಯಾಣ ಈ ಮೂರು ರಾಜ್ಯಗಳು ಬರಪೀಡಿತ ರಾಜ್ಯಗಳ ಪಟ್ಟಿಗೆ ಸೇರಲಿವೆ. ರಾಷ್ಟ್ರದ 2,55,923 ಗ್ರಾಮಗಳು ಬರಪೀಡಿತವಾಗಿವೆ. ಇದರಲ್ಲಿ ಕರ್ನಾಟಕದ 22,759 ಗ್ರಾಮಗಳು ಒಡಿಶಾದ 29,077, ಆಂಧ್ರದ 6,974, ತೆಲಂಗಾಣದ 5,519 ಗ್ರಾಮಗಳು ಬರಪೀಡಿತವಾಗಿವೆ. ಮಧ್ಯಪ್ರದೇಶದಲ್ಲಿ 42,829 ಗ್ರಾಮಗಳು ಬರಪೀಡಿತವಾಗಿವೆ. ಉತ್ತರ ಕರ್ನಾಟಕದ ಬರಪೀಡಿತ ಪ್ರದೇಶಗಳಿಂದ ಸರಿ ಸುಮಾರು 3 ರಿಂದ 4 ಲಕ್ಷ ಮಂದಿ ಗೋವಾ, ಪುಣೆ, ಮುಂಬೈ, ಬೆಂಗಳೂರು ಮತ್ತು ಇನ್ನಿತರ ನೆಲೆ ಅರಸಿ ನಗರಗಳಿಗೆ ಗುಳೆ ಹೋಗಿದ್ದಾರೆ.

ಕಳೆದ ಹತ್ತು ವರ್ಷಗಳ ಹಿಂದೆ ಕೃಷ್ಣಾ ನದಿ ಹಿನ್ನೀರಿನಲ್ಲಿ ಮುಳುಗಿ ಹೋಗಿದ್ದ ಬಾಗಲಕೋಟೆಯ ಕೆಲ ಗ್ರಾಮಗಳು, ಈ ಬಾರಿಯ ತೀವ್ರ ಬೇಸಿಗೆ ಮತ್ತು ಬರದ ಕಾರಣ ನದಿ ನೀರು ಹಿಂಗಿ ಹೋಗಿ ಆ ಗ್ರಾಮಗಳು ಜನರಿಗೆ ಕಾಣಿಸಿಕೊಂಡಿವೆ. 2005ರಲ್ಲಿ ಆಲಮಟ್ಟಿ ಅಣೆಕಟ್ಟಿನ ಎತ್ತರ ಹೆಚ್ಚಿಸಿದ್ದ ಹಿನ್ನೆಲೆಯಲ್ಲಿ ಅಲ್ಲಿನ ಜನ ಬೇರೆಡೆ ಸ್ಥಳಾಂತರಗೊಂಡಿದ್ದರು. ಆದರೆ ಈಗ ಮಳೆಯಿಲ್ಲದ ಬರದ ಕಾರಣ ನೀರಿನ ಪ್ರಮಾಣ ತೀವ್ರವಾಗಿ ತಗ್ಗಿದ್ದು, ಅಂದು ಮುಳುಗಡೆಯಾಗಿದ್ದ ಗ್ರಾಮಗಳು 10 ವರ್ಷದ ನಂತರ ಮರಳಿ ಕಾಣಸಿಗುತ್ತಿವೆ.

# ಜಲಸಂರಕ್ಷಣೆಯಲ್ಲಿ ಜನತೆಯ ಪಾತ್ರ ಅಗ್ರಮಾನ್ಯವಾಗಿದೆ ಪ್ರಧಾನಿ ನರೇಂದ್ರ ಮೋದಿ

ಪ್ರಧಾನಿ ನರೇಂದ್ರ ಮೋದಿ ಆಕಾಶವಾಣಿಯ ತಮ್ಮ ಜನಪ್ರಿಯ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ಬರದ ವಾತಾವರಣವಿದೆ, ಜನರು ನೀರಿಲ್ಲದೆ ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಹನಿ ನೀರಿಗೂ ಬೆಲೆಯಿದ್ದು, ಜಲಸಂರಕ್ಷಣೆಗೆ ಒತ್ತು ನೀಡುವಂತೆ ಸಾರ್ವಜನಿಕರಿಗೆ ಸಲಹೆ ನೀಡಿದ್ದಾರೆ.

ದೇಶದಲ್ಲಿ ತಲೆದೋರಿರುವ ಬರ ಮತ್ತು ಜಲಕ್ಷಾಮ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಲು ಸಹಾಯಕವಾಗುವಂತೆ ಜಲಸಂರಕ್ಷಣೆ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಸರ್ಕಾರ ತನ್ನೆಲ್ಲಾ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆಯಾದರೂ, ಜನತೆಯ ಪಾತ್ರ ಅಗ್ರಮಾನ್ಯವಾಗಿದೆ ಎಂದಿದ್ದಾರೆ.

ಪ್ರತಿ ಹಳ್ಳಿಯಲ್ಲಿಯೂ ಮಳೆ ನೀರಿನ ಸಂಗ್ರಹ ಮತ್ತು ಸಂರಕ್ಷಣೆ ಒಂದು ಆಂದೋಲನವಾಗಿ ಆಚರಣೆಗೆ ಬರಬೇಕು. ಇದು ಸಂಪೂರ್ಣವಾಗಿ ಸಂಘಟಿತ ಪ್ರಯತ್ನದ ಮೂಲಕವೇ ಸಾಧ್ಯವಾಗುತ್ತದೆ. ಭೂಮಿಯ ಅಂತರಜಲ ಸಂಗ್ರಹ ಮಟ್ಟ ಸುಭದ್ರವಾದಾಗ ನೀರಿನ ಪೂರೈಕೆಯೂ ಬಲಿಷ್ಠವಾಗುತ್ತದೆ ಎಂದು ಪ್ರಧಾನಮಂತ್ರಿ ಹೇಳಿದ್ದಾರೆ. ಈ ಬಾರಿ



ಉತ್ತಮ ಮುಂಗಾರಿನ ನಿರೀಕ್ಷೆಯಿದೆ. ಶೇ.110ರಷ್ಟು ಮಳೆಯಾಗುವುದಾಗಿ ಹವಾಮಾನ ಇಲಾಖೆ ಹೇಳಿದೆ ಎಂದ ಅವರು ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

### ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ

# ಸೌಹಾರ್ದ ಸಹಕಾರಿಗಳ ಕಾಯ್ದೆ ಆಶಯದಂತೆ ಕಾರ್ಯ ನಿರ್ವಹಿಸಲು ಪ್ರೋತ್ಸಾಹ ಅಗತ್ಯ - ಶ್ರೀ ಬಸನಗೌಡ ಪಾಟೀಲ್ ಯತ್ನಾಳ

**ಬೆಂಗಳೂರು** : ದಿನಾಂಕ 20 ಏಪ್ರಿಲ್ 20ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ "ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ"ವನ್ನು ಬೆಂಗಳೂರಿನ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯರು ಹಾಗೂ ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸನಗೌಡ ಪಾಟೀಲ್ ಯತ್ನಾಳರವರು ಉದ್ಘಾಟಿಸಿ, ಮಾತನಾಡುತ್ತಾ ಸಹಕಾರ ಕ್ಷೇತ್ರದಲ್ಲಿ ಜನಸಾಮಾನ್ಯರ ಸೇವೆ ಮಾಡಲು ಸಾಕಷ್ಟು ಅವಕಾಶಗಳು ಇವೆ. ಸಹಕಾರ ಕ್ಷೇತ್ರ ಬಹಳ ಬೃಹದಾಕಾರವಾಗಿ ಬೆಳೆದಿದೆ. ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಸಹಕಾರಿ ಕ್ಷೇತ್ರ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ಪೂರಕವಾಗಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದಿದೆ. ಕಳೆದ 15 ವರ್ಷಗಳ ಅವಧಿಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಆದರೂ ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯಕ್ಕೆ ವ್ಯತಿರಿಕ್ತವಾಗಿ ಹಲವಾರು ಬಾರಿ ತಿದ್ದುಪಡಿಗಳನ್ನು ಮಾಡಲಾಗಿದೆ.

ಸೌಹಾರ್ದ ಸಹಕಾರಿಗಳು ಸ್ವಾಯತ್ತತೆ ಯಿಂದ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಅನೇಕ ಆಡಳಿತಾತ್ಮಕ ತೊಂದರೆಗಳು ಎದುರಾಗುತ್ತಿವೆ. ಆದರೂ, ರಾಜ್ಯದ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿರುವ ಸಂಯುಕ್ತ ಸಹಕಾರಿಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಹಲವಾರು ವಿಧವಾದ ತರಬೇತಿ ಕಾರ್ಯಕ್ರಮಗಳನ್ನು ಮತ್ತು ಸೌಹಾರ್ದ ಸಹಕಾರಿಗಳ ಸಮಸ್ಯೆಗಳ ನಿವಾರಣೆಗೆ ಹಲವು ಕ್ರಮಗಳನ್ನು ಜರುಗಿಸುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.



### ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಚಾರ ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಪೂರಕ - ಶ್ರೀ ಗುರುನಾಥ ಜಾಂತಿಕರ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಬೆಳವಣಿಗೆಗೆ ಅಗತ್ಯ ಕ್ರಮಗಳನ್ನು ಸಂಯುಕ್ತ ಸಹಕಾರಿಯು ನಿರ್ವಹಿಸುತ್ತಾ ಬಂದಿದೆ. ವಿಶೇಷವಾಗಿ ಶಿಕ್ಷಣ ಹಾಗೂ ತರಬೇತಿ ವಿಚಾರದಲ್ಲಿ ಅತ್ಯಂತ ಉತ್ತಮ ಕಾರ್ಯಕ್ರಮಗಳನ್ನು ಎಲ್ಲಾ ಹಂತದಲ್ಲೂ ಹಮ್ಮಿಕೊಳ್ಳಲಾಗುತ್ತಿದೆ. ಉತ್ತಮ ಗುಣಮಟ್ಟದ ತರಬೇತಿಯನ್ನು, ಪ್ರಕಟಣೆಗಳನ್ನು, ಪ್ರಚಾರವನ್ನು ಮಾಡಲಾಗುತ್ತಿದೆ. ಕಳೆದ 5 ವರ್ಷಗಳ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳಲ್ಲಿ ಅನೇಕ ಪ್ರಗತಿಯನ್ನು ಹಾಗೂ ಬದಲಾವಣೆಗಳನ್ನು ಸಾಧಿಸಲಾಗಿದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಅತಿಥಿಗಣ್ಯರನ್ನು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಸಂಯುಕ್ತ ಸಹಕಾರಿಯ 2016–17ನೇ ಸಾಲಿನ ಕಾರ್ಯಕ್ರಮಗಳಲ್ಲಿ ಇದು ಮೊದಲನೆಯ ತರಬೇತಿ ಕಾರ್ಯಕ್ರಮವಾಗಿದೆ. ತರಬೇತಿಯಲ್ಲಿ ನಿರ್ದೇಶಕರುಗಳಿಗೆ ಅವರ ಆಡಳಿತ ಪರಿಣಿತಿಯನ್ನು ಹೆಚ್ಚಿಸುವಂತಹ ಅನೇಕ ವಿಷಯಗಳನ್ನು ನುರಿತ ಸಹಕಾರಿ ಅಧಿಕಾರಿಗಳು ಹಾಗೂ ತಜ್ಞರು ಉಪನ್ಯಾಸ ಮಾಡಲಿದ್ದಾರೆ ಎಂದು ತಿಳಿಸಿದರು.

ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್.ಕೆ.ರವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾಂತೀಯ ನಿರ್ದೇಶಕರಾದ ಶ್ರೀ ವಸಂತ ನಾಯಕ, ಪ್ರಾಧ್ಯಾಪಕರಾದ ಡಾ. ಕಿಶೋರ, ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರು ಹಾಗೂ ಶಿವ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್. ಸುಲ್ತಾನಪುರಿಯವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಶ್ರೀ ಹೆಚ್.ಎಸ್. ನಾಗರಾಜಯ್ಯ, ಶ್ರೀ ಬಿ.ಎ.ಮಹದೇವಪ್ಪ, ಶ್ರೀ ಶ್ರೀಕಾಂತ ಬರುವೆ, ಡಾ. ನಂದೀಶ ಹಿರೇಮಠ ಹಾಗೂ ಡಾ. ಎಸ್.ಎ.ಸಿದ್ಧಾಂತಿಯವರು

ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಶಿಬಿರದಲ್ಲಿ ರಾಜ್ಯದ 14 ಜಿಲ್ಲೆಗಳ 54 ಸೌಹಾರ್ದ ಸಹಕಾರಿಗಳಿಂದ 75 ಪ್ರತಿನಿಧಿಗಳು ಭಾಗವಹಿಸಿದ್ದರು. ಸಮಾರೋಪ ಕಾರ್ಯಕ್ರಮದಲ್ಲಿ ಹಲವಾರು ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಕಾರ್ಯಕ್ರಮ ಬಹಳ ಪ್ರಯೋಜನಕಾರಿಯಾಗಿತ್ತೆಂದು ತಿಳಿಸಿದರು.

ಅಧ್ಯಕ್ಷತೆಯನ್ನು ಶಿವ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್.ಸುಲ್ತಾನಪುರಿಯವರು ವಹಿಸಿ, ಸಂಯುಕ್ತ ಸಹಕಾರಿ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಿದೆ. ಸೌಹಾರ್ದ ಸಹಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಪ್ರಯೋಜನ ಪಡೆಯಬೇಕೆಂದು ತಿಳಿಸಿದರು.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

ಕೊಡಗು ವಿದ್ಯಾ ಇಲಾಖೆ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಡಿಕೇರಿ.



ಶ್ರೀ ಮಂಜುನಾಥ ಕುಮಾರ್ ಕೆ ಕೆ
**ಅಧ್ಯಕ್ಷರು**



ರೇವತಿ ಡಿ.ಎಂ.
**ಉಪಾಧ್ಯಕ್ಷರು**

## "Plan, Believe, Achieve"

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 2016-17ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನಾ ಸಭೆ




ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯು ಪುತ್ತೂರಿನಲ್ಲಿ ಕೇಂದ್ರ ಕಛೇರಿಯನ್ನು ಹೊಂದಿ 13 ಶಾಖೆಗಳೊಂದಿಗೆ ಕಾರ್ಯಾಚರಿಸುತ್ತಿರುವ ಸಹಕಾರಿಯ 2016–17ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನಾ ಸಭೆಯು ದಿನಾಂಕ : 19–04–2016ರಂದು ಮರಾಠಿ ಸಮಾಜ ಸೇವಾ ಸಂಘ ಕೊಂಬೆಟ್ಟಿನಲ್ಲಿ ''Plan, Believe, Achieve'' ಎಂಬ ಧ್ಯೇಯ ವಾಕ್ಯದೊಂದಿಗೆ ನಡೆಯಿತು. ವಿಟ್ಲ ಗ್ರಾಮೀಣ ಸಹಕಾರಿ ಬ್ಯಾಂಕ್ ಇದರ ಅಧ್ಯಕ್ಷರಾದ ಶ್ರೀ ಎಲ್ ಎನ್ ಕೂಡೂರು ಇವರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿ, ಹೊರಗಿನ ಯಾವುದೇ ಸೌಲಭ್ಯಗಳಿದ್ದರೂ ಕೂಡ ನಾವು ಸ್ವತಃ ಪರಿಶ್ರಮಪಡದಿದ್ದರೆ ಫಲ ದೊರೆಯುವುದಿಲ್ಲ, ಹಾಗಾಗಿ ನಾವು ವಾಸ್ತವ ವಿಷಯಗಳನ್ನು ಅರಿತು ಸಮರ್ಥರಾಗಿ ನಮ್ಮ ಕ್ಷೇತ್ರದಲ್ಲಿ ಯಶಸ್ಸನ್ನು ಸಾಧಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಆರ್.ಸತೀಶ್ಚಂದ್ರರವರು ಸರಸ್ವತಿಯ ಸಾಧನೆಗೆ ಎಲ್ಲರನ್ನೂ ಅಭಿನಂದಿಸಿ, 2016–17ನೇ ಸಾಲಿನ ಬಜೆಟ್‌ನ್ನು ಘೋಷಣೆ ಮಾಡಿ, ಮಾತನಾಡುತ್ತಾ ಯಶಸ್ಸಿಗೆ 2 ದಾರಿ, ಅನುಕರಣೆ ಮತ್ತು ಸಂಶೋಧನೆ. ಇದರಲ್ಲಿ ನಮ್ಮದು ಸಂಶೋಧನೆ, ಜಗತ್ತು ಅವಕಾಶಗಳ ಆಗರ ಇಲ್ಲಿ ನಿರಂತರವಾಗಿ ಕ್ರಿಯಾಶೀಲರಾಗಿರುವವರು ಯಶಸ್ಸನ್ನು ಪಡೆಯುತ್ತಾರೆ. ಅಂತೆಯೇ, ಸ್ಕಿಲ್ಸ್ ಇದ್ದರೆ ಸಾಲದು ಸ್ಪೀಡ್ ಇರಬೇಕು ಎಂದರು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ರೂ.2.52 ಕೋಟಿ ನಿವ್ವಳ ಲಾಭ

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದಿ : 31–03–2016ಕ್ಕೆ ಕೊನೆಗೊಂಡ ಆರ್ಥಿಕ ವರ್ಷಾಂತ್ಯಕ್ಕೆ ರೂ.2.52 ಕೋಟಿ ನಿವ್ವಳ ಲಾಭ ಗಳಿಸಿರುತ್ತದೆ. 2001ರಲ್ಲಿ ಆರಂಭಗೊಂಡ ಸಹಕಾರಿಯು 13 ಶಾಖೆಗಳ ಮೂಲಕ ಕಾರ್ಯಾಚರಿಸುತ್ತಿದ್ದು, ನಿರಂತರ ಪ್ರಗತಿಯಲ್ಲಿ ಮುನ್ನಡೆಯುತ್ತಿದೆ.

ಪ್ರಸ್ತುತ 20500 ಸದಸ್ಯರನ್ನು ಹೊಂದಿದ್ದು, ರೂ. 134.91 ಕೋಟಿ ಠೇವಣಿ, ರೂ.108.85 ಕೋಟಿ ಸಾಲ, ದುಡಿಯುವ ಬಂಡವಾಳ ರೂ.146 ಕೋಟಿ ಇದ್ದು, ಸದಸ್ಯರಿಗೆ 15% ಡಿವಿಡೆಂಡನ್ನು ವಿತರಿಸಲಾಗುತ್ತಿದೆ ಎಂದು ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ಎ. ತಿಳಿಸಿದ್ದಾರೆ.

# ಮಹಿಳಾ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ

## ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಹಕಾರಿ ಕ್ಷೇತ್ರದಿಂದ ಸಾಧ್ಯ- ಶ್ರೀ ಗುರುನಾಥ ಜಾಂತಿಕರ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಮಹಿಳಾ ನಿರ್ದೇಶಕರುಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ 29, 30 ಏಪ್ರಿಲ್ 2016ರಂದು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ರಾಜ್ಯದ ಸೌಹಾರ್ದ ಸಹಗಕಾರಿ ಚಳುವಳಿಗೆ ಈಗ 15 ವರ್ಷಗಳು ಮುಗಿದಿವೆ. 16ನೇ ವರ್ಷದಲ್ಲಿ ಪಾದಾರ್ಪಣೆ ಮಾಡಿದೆ. ಪ್ರಗತಿ ವೇಗದಲ್ಲಿದೆ. ರಾಜ್ಯದಲ್ಲಿ ಈಗ 3500ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಅದರಲ್ಲಿ 160ಕ್ಕಿಂತಲೂ ಹೆಚ್ಚು ಮಹಿಳಾ ಸೌಹಾರ್ದ ಸಹಕಾರಿ ಸಂಸ್ಥೆಗಳಿವೆ. 200ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಲ್ಲಿ ಮಹಿಳೆಯರು ಅಧ್ಯಕ್ಷರಾಗಿದ್ದಾರೆ. 7200ಕ್ಕೂ ಹೆಚ್ಚು ಮಹಿಳೆಯರು ನಿರ್ದೇಶಕರಾಗಿದ್ದಾರೆ. ಈ ಪ್ರಮಾಣವನ್ನು ಗಮನದಲ್ಲಿರಿಸಿ ಸಂಯುಕ್ತ ಸಹಕಾರಿಯು ಮಹಿಳೆಯರಿಗೆ ಸಹಕಾರಿ ಕಾರ್ಯಚಟುವಟಿಕೆಗಳ ಬಗ್ಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಸಹಕಾರಿ ಕ್ಷೇತ್ರದಿಂದ ಮಾತ್ರ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು.

## ಆಡಳಿತ ಮಂಡಲಿಯಲ್ಲಿ ಮಹಿಳಾ ನಿರ್ದೇಶಕರ ಜವಾಬ್ದಾರಿ ಹೆಚ್ಚಿನದು – ಶ್ರೀಮತಿ ಮಂಜುಳಾ ಪಾಟೀಲ್

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲ್‌ರವರು ಮಾತನಾಡಿ ಸಹಕಾರ ಕ್ಷೇತ್ರ ಜನಸಾಮಾನ್ಯರ ಅಭಿವೃದ್ಧಿಗಾಗಿಯೇ ಇರುವಂತಹ ಕ್ಷೇತ್ರ. ಅದರಲ್ಲೂ ವಿಶೇಷವಾಗಿ ಮಹಿಳೆಯರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಬೆಳೆಯಲು ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿವೆ. ಅದರಲ್ಲೂ 97ನೇ ಸಂವಿಧಾನ ತಿದ್ದುಪಡಿಯ ನಂತರ ಆಡಳಿತ ಮಂಡಲಿಯಲ್ಲಿ ಮಹಿಳೆಯರಿಗೆ ಈಗ 2 ಸ್ಥಾನಗಳನ್ನು ನೀಡಲಾಗಿದೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ನಮ್ಮ ಜವಾಬ್ದಾರಿಗಳನ್ನು ಅರಿತುಕೊಂಡು ಕಾರ್ಯನಿರ್ವಹಿಸಲು ನಾವು ಮುಂದಾಗಬೇಕು. ತರಬೇತಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಹೆಚ್ಚು ಮಹಿಳೆಯರು ತರಬೇತಿಗಳಲ್ಲಿ ಭಾಗವಹಿಸಿ, ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾಂತೀಯ ನಿರ್ದೇಶಕರಾದ ಶ್ರೀ ವಸಂತನಾಯಕರವರು ಉಪಸ್ಥಿತರಿದ್ದು, ತನ್ನ ಸಂಸ್ಥೆಯ ಪರವಾಗಿ ಗಣ್ಯರನ್ನು ಹಾಗೂ ಪ್ರತಿನಿಧಿಗಳನ್ನು ಸ್ವಾಗತಿಸಿ, ತರಬೇತಿಯ ಮಹತ್ವ ಕುರಿತು ವಿವರಿಸಿದರು. ಡಾ. ಕಿಶೋರ, ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಶ್ರೀಮತಿ ವಿದ್ಯಾಕೃಷ್ಣಮೂರ್ತಿಯವರು ಪ್ರಾರ್ಥನೆ ಮಾಡಿದರು. ಶ್ರೀ ವಿ.ಜೆ.ಕಾರಕೂನ, ತರಬೇತಿ ಅಧಿಕಾರಿಯವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಕಿರಿಯ ಅಧಿಕಾರಿ ಶ್ರೀಮತಿ ಸವಿತಾರವರು ಕಾರ್ಯಕ್ರಮ ನಿರೂಪಣೆ ಮಾಡಿದರು.

ಎರಡು ದಿನಗಳ ತರಬೇತಿ ಅವಧಿಯಲ್ಲಿ ರಾಜ್ಯದ 19 ಜಿಲ್ಲೆಗಳ 33 ಸೌಹಾರ್ದ ಸಹಕಾರಿಗಳ 69 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.

ಡಾ. ಎಸ್.ಎ.ಸಿದ್ಧಾಂತಿ, ಶ್ರೀ ಬಿ.ಎ.ಮಹದೇವಪ್ಪ, ಶ್ರೀಮತಿ ಶೋಭ, ಶ್ರೀ ಶ್ರೀಕಾಂತ ಬರುವೆ, ಶ್ರೀಮತಿ ಲೀನಾ, ಡಾ. ನಂದೀಶ ವಿ. ಹಿರೇಮಠ, ಶ್ರೀ ಸಿದ್ದು ಯಾಪಲಪರ್ವಿಯವರುಗಳು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಉಪನ್ಯಾಸಗಳನ್ನು ನೀಡಿದರು.



ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು

## ತರಬೇತಿ ಕೌಶಲ್ಯವನ್ನು ಹೆಚ್ಚಿಸುತ್ತದೆ – ಶ್ರೀ ಕೆ.ಎಸ್.ನವೀನ

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಕೆ.ಎಸ್.ನವೀನರವರು ಮಾತನಾಡಿ ಇಂದು ಮಹಿಳೆಯರು ಎಲ್ಲ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಮುಂದೆ ಬರುತ್ತಿದ್ದಾರೆ. ಆದರೆ, ಅವರುಗಳಿಗೆ ಯಾವ ರೀತಿ ಕಾರ್ಯನಿರ್ವಹಿಸಬೇಕು? ಮಹಿಳೆಯರಿಗಾಗಿ ಯಾವ ಯಾವ ಯೋಜನೆಗಳು ಜಾರಿಯಲ್ಲಿವೆ? ಮಹಿಳೆಯರು ಯೋಜನೆಗಳ ಪ್ರಯೋಜನ ಹೇಗೆ ಪಡೆಯಬೇಕು? ಮುಂತಾದ ವಿವಿಧ ರೀತಿಯ ಚಟುವಟಿಕೆಗಳ ಬಗ್ಗೆ ಮಹಿಳೆಯರು ತರಬೇತಿಯನ್ನು ಪಡೆದು ಕಾರ್ಯನಿರತರಾದಾಗ ಯಶಸ್ವಿಯಾಗುವುದು ಸಾಧ್ಯವಾಗುತ್ತದೆ. ಸಂಯುಕ್ತ ಸಹಕಾರಿಯ ಅನೇಕ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಬಹಳ ಉತ್ತಮವಾದ ವಿಷಯಗಳನ್ನು ಮತ್ತು ನುರಿತ ಸಹಕಾರಿ ತಜ್ಞರುಗಳಿಂದ ತರಬೇತಿ ನೀಡುತ್ತಾರೆ. ವ್ಯವಸ್ಥಿತವಾದ, ಸಮಯಪ್ರಜ್ಞೆ ಹಾಗೂ ಶಿಸ್ತುಬದ್ಧ ತರಬೇತಿಯನ್ನು ನಡೆಸುತ್ತಾರೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿ, ಮಹಿಳೆಯರು ಹೆಚ್ಚು ತರಬೇತಿಯನ್ನು ಪಡೆದು ಕಾರ್ಯನಿರ್ವಹಿಸಿದಲ್ಲಿ ಉತ್ತಮ ಸಹಕಾರಿಗಳಾಗಿ ಕಾರ್ಯನಿರ್ವಹಿಸಲು ಸಾಧ್ಯ, ತರಬೇತಿ ನಮ್ಮ ಕೌಶಲ್ಯವನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದರು.

## ಮಹಿಳೆಯರು ಅವಕಾಶಗಳನ್ನು ಸದುಪಯೋಗಮಾಡಿಕೊಳ್ಳಲು ಕರೆ – ಶ್ರೀ ಗುರುನಾಥ ಜಾಂತಿಕರ



ಶಿಬಿರಾರ್ಥಿಗಳೊಂದಿಗೆ ಚರ್ಚೆಯಲ್ಲಿ ಶ್ರೀ ಗುರುನಾಥ ಜಾಂತಿಕರ, ಶ್ರೀ ಕೆ.ಎಸ್. ನವೀನ ಹಾಗೂ ಶ್ರೀಮತಿ ಮಂಜುಳಾ ಪಾಟೀಲ

ದಿನಾಂಕ 30.04.2016 ರಂದು ಸಂಜೆ 4.30ಕ್ಕೆ ಏರ್ಪಡಿಸಿದ ಚರ್ಚೆ ಹಾಗೂ ಸಮಾರೋಪ ಕಾರ್ಯಕ್ರಮದಲ್ಲಿ ಅನೇಕ ಪ್ರತಿನಿಧಿಗಳು ಕಾರ್ಯಕ್ರಮ ತುಂಬ ಪ್ರಯೋಜನಕಾರಿಯಾಗಿತ್ತೆಂದು ತಿಳಿಸಿದರು ಹಾಗೂ ಅನೇಕ ವಿಷಯಗಳ ಬಗ್ಗೆ ಪ್ರತಿನಿಧಿಗಳು ಅಧ್ಯಕ್ಷರೊಡನೆ ಸಮಾಲೋಚನೆ ನಡೆಸಿದರು. ನಂತರ ಮಾತನಾಡಿದ ಶ್ರೀ ಗುರುನಾಥ ಜಾಂತಿಕರರವರು ಉತ್ತಮ ತರಬೇತಿ ನೀಡಲಾಗಿದೆ. ಇನ್ನೂ ಅನೇಕ ತರಬೇತಿಗಳನ್ನು ನಡೆಸಲಾಗುತ್ತದೆ. ಅಲ್ಲದೇ, ಮಹಿಳಾ ಅಭಿವೃದ್ಧಿ ನಿಗಮದವರು ಮತ್ತು ಲಘು ಉದ್ಯೋಗ ಭಾರತಿಯವರು ಮಹಿಳೆಯರಿಗಾಗಿ ಇರುವ ಉದ್ಯೋಗ ಅವಕಾಶಗಳ ಬಗ್ಗೆ ವಿವರ ನೀಡಿದ್ದಾರೆ. ಅತ್ಯಂತ ಉತ್ತಮ ಕಾರ್ಯಕ್ರಮ ಇದಾಗಿದೆ. ಮಹಿಳೆಯರು ಈ ಕಾರ್ಯಕ್ರಮದ ಸದುಪಯೋಗ ಮಾಡಿಕೊಂಡಾಗ ಸಂಯುಕ್ತ ಸಹಕಾರಿಯ ಪ್ರಯತ್ನ ಸಾರ್ಥಕ ಎಂದು ತಿಳಿಸಿದರು.

## ಯಾದಗಿರಿ ಶ್ರೀ ಶ್ರೀ ಶ್ರೀ ಜಗದ್ಗುರು ಪಂಚಾಚಾರ್ಯ ಸೌಹಾರ್ದ ಸಹಕಾರಿ ನಿ., ಸಹಕಾರಿಯ ಉದ್ಘಾಟನೆ



ಶ್ರೀ ಶ್ರೀ ಶ್ರೀ ಜಗದ್ಗುರು ಪಂಚಾಚಾರ್ಯ ಸೌಹಾರ್ದ ಸಹಕಾರಿ ನಿ., ಯಾದಗಿರಿ ಸಹಕಾರಿಯ ಉದ್ಘಾಟನೆಯನ್ನು ದಿನಾಂಕ 11.04.2016ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ನೆರವೇರಿಸಿ, ಸಂಯುಕ್ತ ಸಹಕಾರಿಯ ಪರಿಚಯ ಹಾಗೂ ನಡೆದು ಬಂದ ಹಾದಿಯ ಕುರಿತು ಮಾತನಾಡಿದರು. ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಪೂಜ್ಯ ಶ್ರೀ ಚನ್ನವೀರ ದೇವರು ನೆರವೇರಿಸಿದರು. ಅತಿಥಿಗಳಾಗಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಿದ್ಧರಾಮರೆಡ್ಡಿ ವಿ. ಪಾಟೀಲ್, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವೈ.ಟಿ.ಪಾಟೀಲ್, ಕ.ಸಾ.ಪ. ಜಿಲ್ಲಾ ಅಧ್ಯಕ್ಷರಾದ ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು, ಸದಸ್ಯರುಗಳು ಭಾಗವಹಿಸಿದ್ದರು.

## ಕಲಬುಗರಿ ಜಿಲ್ಲೆಯ ನಂದಿ ವನಕ್ಕೆ ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ ಭೇಟಿ



ಕಲಬುರಗಿ ಜಿಲ್ಲೆಯ ಬರಪೀಡಿತ ಪ್ರದೇಶದ ರೈತರ ಎತ್ತುಗಳಿಗೆ ಶ್ರೀ ಬಸವರಾಜ ದಿಗ್ಗಾವಿಯವರು ತೆರೆದಿರುವ ಉಚಿತ ಮೇವು ಕೇಂದ್ರ "ನಂದಿವನ"ಕ್ಕೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಭೇಟಿ ನೀಡಿ, ರೈತರು ಹಾಗೂ ದಿಗ್ಗಾವಿಯವರ ತಾಯಿಯವರೊಂದಿಗೆ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಶ್ರೀ ಬಸವರಾಜ ದಿಗ್ಗಾವಿ ಹಾಗೂ ಕುಟುಂಬ ಸದಸ್ಯರ ಕಾರ್ಯಕ್ಕೆ ಅಭಿನಂದನೆ ತಿಳಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವೈ.ಟಿ.ಪಾಟೀಲ್ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಿವಕುಮಾರ್ ಬಿ.ಎಸ್.ರವರು ಉಪಸ್ಥಿತರಿದ್ದರು. ನಂದಿವನದಲ್ಲಿ ಜಾನುವಾರುಗಳೊಂದಿಗೆ ಬಂದಿರುವ ರೈತರಿಗೆ ವಿವಿಧ ರೀತಿಯ ತರಬೇತಿಗಳನ್ನು ನೀಡುವುದರ ಜೊತೆಗೆ ಅವರಿಗೆ ಅಕ್ಷರ ಜ್ಞಾನವನ್ನು ನೀಡುವ ವ್ಯವಸ್ಥೆ ಶ್ಲಾಘನೀಯ ಎಂದು ಗುರುನಾಥ ಜಾಂತಿಕರ ತಿಳಿಸಿದರು.

## ಏಪ್ರಿಲ್ 2016ರಲ್ಲಿ ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಚಟುವಟಿಕೆಗಳು

**ವಿಶೇಷಾಧಿಕಾರಿಗಳ ನೇಮಕ :** ಸಹಕಾರಿಯ ಆಡಳಿತ ಮಂಡಲಿಯು ಮುಕ್ತಾಯಗೊಂಡಿರುವುದರಿಂದ ಮತ್ತು ನೂತನ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗುವ ಕಾರಣ ಈ ಕೆಳಗಿನ ಸೌಹಾರ್ದ ಸಹಕಾರಿಗಳ ವಿಶೇಷಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

| ಕ್ರ.ಸಂ. | ಸಹಕಾರಿಯ ಹೆಸರು | ವಿಶೇಷಾಧಿಕಾರಿಗಳು |
|---|---|---|
| 1. | ಶ್ರೀ ಗಜಾನನ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ. | ಶ್ರೀ ವೆಂಕಟೇಶ, ಸಹಾಯಕ, ಬೆಳಗಾವಿ ವಿಭಾಗೀಯ ಕಛೇರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. |
| 2. | ದಿ ರೆಡ್ಡಿ ಸೌಹಾರ್ದ ಪತ್ತಿನ ಸಹಕಾರಿ ನಿ., ಚಳ್ಳಕೆರೆ, ಚಿತ್ರದುರ್ಗ. | ಶ್ರೀ ವೀರಶೆಟ್ಟಿ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ವಿಭಾಗ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. |
| 3. | ಕುಮದ್ವತಿ ಸೌಹಾರ್ದ ಸಹಕಾರಿ ನಿ., ಶಿಕಾರಿಪುರ, ಶಿವಮೊಗ್ಗ. | |
| 4. | ವಿಶ್ವೇಶ್ವರಯ್ಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಭದ್ರಾವತಿ, ಶಿವಮೊಗ್ಗ. | |

## ಪ್ರಕಟಣೆ

ಕನ್ನಡ ಸಾಹಿತ್ಯ ಪರಿಷತ್ತು ಹೊರತಂದಿರುವ ಎಂಟು ಸಂಪುಟಗಳ ನಿಘಂಟು ಇದನ್ನು ಅಂಕೀಕರಣ ಮಾಡಲು ನಿರ್ಧರಿಸಿದೆ. ಒಟ್ಟು ಹತ್ತು ಸಾವಿರ ಪುಟಗಳಿರುವ ನಿಘಂಟಿನ ಅಂಕೀಕರಣದ ಜವಾಬ್ದಾರಿ ಕನ್ನಡ ಗಣಕ ಪರಿಷತ್ತಿಗೆ ಸಂದಿದೆ. ಕನ್ನಡ ಗಣಕ ಪರಿಷತ್ತು ಈ ಮಹತ್ತರ ಕಾರ್ಯದಲ್ಲಿ ನಾಡಿನ ಎಲ್ಲೆಡೆಯಿಂದ ಆಸಕ್ತರು ಭಾಗವಹಿಸಬೇಕೆಂದು ಆಶಿಸಿದೆ. ಇದರ ಪುಟಗಳನ್ನು ನುಡಿಯಲ್ಲಿ ಬೆರಳಚ್ಚು ಮಾಡುವ ಆಸಕ್ತಿ ಇರುವವರು ತಮ್ಮ ಹೆಸರು ಮತ್ತು ದೂರವಾಣಿ ಸಂಖ್ಯೆಗಳನ್ನು ತಿಳಿಸಿದರೆ ಅವರಿಗೆ ನಿಘಂಟಿನ ಪುಟಗಳನ್ನು ಒದಗಿಸಲಾಗುವುದು. ಅವುಗಳಲ್ಲಿ ಮಾಹಿತಿಯನ್ನು ನಿಗದಿತ ಅವಧಿಯಲ್ಲಿ ತಪ್ಪಿಲ್ಲದೆ ಬೆರಳಚ್ಚು ಮಾಡಿ ಕಡತವನ್ನು ಕನ್ನಡ ಗಣಕ ಪರಿಷತ್ತಿನ ಇ-ಅಂಚೆಯ ಮೂಲಕ ಕಳುಹಿಸಿಕೊಡಬೇಕು. ಪ್ರತಿ ಪುಟಕ್ಕೆ ನಿಗದಿತ ಮೌಲ್ಯದ ಸಂಭಾವನೆ ನೀಡಲಾಗುತ್ತದೆ. ಮನೆಯಲ್ಲಿರುವ ಗೃಹಿಣಿಯರು, ಬಿಡುವಿನಲ್ಲಿರುವ ವಿದ್ಯಾರ್ಥಿಗಳು, ಅಧ್ಯಾಪಕರು, ದತ್ತ ನಮೂದಿನಲ್ಲಿ ತೊಡಗಿಕೊಂಡವರು ಅಥವಾ ಯಾರೇ ಆಸಕ್ತರು ಇದರಲ್ಲಿ ಭಾಗವಹಿಸಬಹುದಾಗಿದೆ.

**ಶ್ರೀ ಜಿ.ಎನ್.ನರಸಿಂಹಮೂರ್ತಿ, ಕಾರ್ಯದರ್ಶಿ, ಕನ್ನಡ ಗಣಕ ಪರಿಷತ್ತು, ಬೆಂಗಳೂರು. ದೂರವಾಣಿ – 08026615972, 9845362956**

### ಸಹಕಾರಿಯ ಉದ್ಘಾಟನಾ ಕಾರ್ಯಕ್ರಮ

## ಸರ್ ಎಂ.ವಿಶ್ವೇಶ್ವರಯ್ಯ ಸೌಹಾರ್ದ ಸಹಕಾರಿ ನಿ., ವಿಜಯಪುರ



ಸರ್ ಎಂ.ವಿಶ್ವೇಶ್ವರಯ್ಯ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮವು ದಿನಾಂಕ 25.04.2016ರಂದು ವಿಜಯಪುರದ ಶ್ರೀ ಸಿದ್ಧೇಶ್ವರ ಕಲಾ ಭವನದಲ್ಲಿ ಜರುಗಿತು. ಈ ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಹಾಗೂ ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸನಗೌಡ ಪಾಟೀಲ ಯತ್ನಾಳ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ನಿರ್ದೇಶಕರಾದ ಶ್ರೀ ರಾಜಶೇಖರ ನಾಗಮೂರ್ತಿ ಹಾಗೂ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿ ಸದಸ್ಯರು ಉಪಸ್ಥಿತರಿದ್ದರು.

## ಕೃಷ್ಣಾ ಗ್ರಾಮೀಣ ರೈತ ಸಿರಿ ಸೌಹಾರ್ದ ಸಹಕಾರಿ ನಿ.,

ಕೃಷ್ಣಾ ಗ್ರಾಮೀಣ ರೈತ ಸಿರಿ ಸೌಹಾರ್ದ ಸಹಕಾರಿ ನಿ., ತೆಗ್ಗಿ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮ. ಶ್ರೀ ಪ್ರಭು ಮಹಾಸ್ವಾಮಿಗಳು, ವಿರಕ್ತಮಠ, ಬೂದಿಹಾಳ ಸಾನಿಧ್ಯದಲ್ಲಿ ಶ್ರೀ ಈಶ್ವರ ಮಂಟೂರ, ಹುನ್ನೂರ-ಮುದರಖಂಡಿ ನೇತೃತ್ವದಲ್ಲಿ, ಶ್ರೀ ಮುರಗೇಶ ಆರ್. ನಿರಾಣಿ, ಮಾಜಿ ಸಚಿವರ ಅಧ್ಯಕ್ಷತೆಯಲ್ಲಿ ಶ್ರೀ ಜಗದೀಶ ಟಿ. ಪಾಟೀಲ, ಶಾಸಕರು, ಬೀಳಗಿ ಇವರು ಉದ್ಘಾಟನೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ಎಂ.ಎನ್.ಪಾಟೀಲ, ಸ್ವಾಮಿ ವಿವೇಕಾನಂದ ಸಂಸ್ಥೆ, ಬೀಳಗಿ, ಶ್ರೀ ಜಿ.ಎನ್.ಪಾಟೀಲ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಲಿ ಮತ್ತು ಸಲಹಾ ಸಮಿತಿ ಸದಸ್ಯರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



### ಬೆಂಗಳೂರಿನಲ್ಲಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ

ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗೆ 15ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿಯನ್ನು ಬೆಂಗಳೂರಿನ ಪದ್ಮನಾಭನಗರದಲ್ಲಿರುವ "ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ"ಯಲ್ಲಿ ದಿನಾಂಕ : 10–06–2016 ರಿಂದ 19–06–2016ರವರೆಗೆ ವ್ಯವಸ್ಥೆ ಮಾಡಲಾಗಿದೆ. ಭಾಗವಹಿಸಲಿಚ್ಛಿಸುವ ಸೌಹಾರ್ದ ಸಹಕಾರಿಗಳು ತಮ್ಮ ಸಿಬ್ಬಂದಿಯವರ ಹೆಸರು ನೋಂದಣಿ ಮಾಡಲು ಸೂಚಿಸಿದೆ. ಈ ಬಗ್ಗೆ ಈಗಾಗಲೇ ಕಳುಹಿಸಿರುವ ಸುತ್ತೋಲೆಯನ್ನು ಎಲ್ಲಾ ಸೌಹಾರ್ದ ಸಹಕಾರಿಗಳು ಗಮನಿಸಿ ಕ್ರಮವಿಡಲು ಕೋರಿದೆ.

### ಚಂದ್ರಹಾಸ್ ರೈ



ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾಗಿರುವ ಶ್ರೀ ದರ್ಬೆ ಚಂದ್ರಹಾಸ್ ರೈಯವರು ಓರ್ವ ಕ್ರೀಡಾಪಟು, ಕಬಡ್ಡಿ ಹಾಗೂ ವೈಟ್ ಲಿಫ್ಟಿಂಗ್‌ನಲ್ಲಿ ರಾಜ್ಯವನ್ನು ಹಲವಾರು ಬಾರಿ ಪ್ರತಿನಿಧಿಸಿದ್ದಾರೆ. ಸುಮಾರು 10 ಬಾರಿ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ತಾಂತ್ರಿಕ ಅಧಿಕಾರಿಯಾಗಿ ಭಾಗವಹಿಸಿರುವ ರೈಯವರು ಇದೇ ಏಪ್ರಿಲ್ 20 ರಿಂದ 30ರವರೆಗೆ ಉಜ್‌ಬೆಕಿಸ್ತಾನದ ತಾಷ್ಕೆಂಟ್‌ನಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್ ಶಿಪ್‌ನಲ್ಲಿ ಸ್ಪರ್ಧಾ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಲಿದ್ದಾರೆ.

## ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,



ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯ ಪ್ರಧಾನ ಕಛೇರಿ ಮತ್ತು ಮುಖ್ಯ ಶಾಖೆಯ ಕಟ್ಟಡವನ್ನು ದಿನಾಂಕ 10.04.2016ರಂದು ಮಿನಿ ವಿಧಾನಸೌಧದ ಎದುರು, ಹಂಪನಕಟ್ಟ, ಮಂಗಳೂರು ಇಲ್ಲಿ ಕ್ಯಾಂಪ್ಕೋ ಲಿಮಿಟೆಡ್‌ನ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಉದ್ಘಾಟಿಸಿದರು. ಶ್ರೀ ರಮೇಶ್ ನಾಯಕ್, ಶ್ರೀ ಎಸ್.ಪಿ.ಚಂಗಪ್ಪ, ಶ್ರೀ ಪ್ರಕಾಶ್ ನಾಯಕ್, ಶ್ರೀಮತಿ ಮೀನಾ ಎಸ್. ಶೆಟ್ಟಿ, ಶ್ರೀ ಭುಜಂಗೇಶ್ ಕಾಮತ್, ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಎಂ.ಮಂಜುನಾಥ ಪ್ರಭು, ಹಾಲಿ ಅಧ್ಯಕ್ಷರಾದ ಶ್ರೀ ಗಣೇಶ್ ಶೆಣೈ, ಉಪಾಧ್ಯಕ್ಷರಾದ ಶ್ರೀ ಮಾಧವ ಪ್ರಭು, ಎಲ್ಲಾ ನಿರ್ದೇಶಕರು, ಜನರಲ್ ಮ್ಯಾನೇಜರ್ ಶ್ರೀ ಕೆ.ಪಿ.ಭಟ್ ಹಾಗೂ ಮ್ಯಾನೇಜರ್ ಶ್ರೀಮತಿ ಅನಿತಾರವರು ಉಪಸ್ಥಿತರಿದ್ದರು.

## ಕೋಲಾರದಲ್ಲಿ ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಶಾಖೆಯ ಉದ್ಘಾಟನೆ



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಸಹಕಾರಿಯ 24ನೇ ಶಾಖೆಯನ್ನು ದಿನಾಂಕ 17.04.2016ರಂದು ಯಲಹಂಕದಲ್ಲಿ ಶ್ರೀ ಎಸ್.ಆರ್.ವಿಶ್ವನಾಥ್, ಮಾನ್ಯ ಶಾಸಕರು, ಕರ್ನಾಟಕ ಸರ್ಕಾರ, ಯಲಹಂಕ ಕ್ಷೇತ್ರ, ಬೆಂಗಳೂರು ಇವರು ಉದ್ಘಾಟಿಸಿದರು. ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ನರಸಿಂಹನಾಯಕ್ ಮತ್ತು ಶ್ರೀ ಮುನಿಂದ್ರ ಕುಮಾರ್, ಬಿ.ಬಿ.ಎಂ.ಪಿ. ಸದಸ್ಯರು ಇವರುಗಳು ಉಪಸ್ಥಿತರಿದ್ದರು.

### ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

27.04.16ರಂದು ನಡೆದ ಶ್ರೀ ಮಾತಾಜಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತದ ಪದಾಧಿಕಾರಿಗಳ ಚುನಾವಣೆಯಲ್ಲಿ ಶ್ರೀ ಡಿ.ವಿ. ಶಾಸ್ತ್ರೀರವರು ಅಧ್ಯಕ್ಷರಾಗಿ ಹಾಗೂ ಶ್ರೀ ಅನಿಲ್ ಬರೂರ್ ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.



ಶ್ರೀ ಡಿ.ವಿ. ಶಾಸ್ತ್ರೀ
ಅಧ್ಯಕ್ಷರು



ಶ್ರೀ ಅನಿಲ್ ಬರೂರ್
ಉಪಾಧ್ಯಕ್ಷರು

## ಶ್ರೀಮತಿ ಮಂಜುಳಾ ಪಾಟೀಲರವರಿಗೆ ಸನ್ಮಾನ



ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲರವರು ಸಿಂಧನೂರು ನಗರ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಕಲಬುರಗಿ ವಿಭಾಗೀಯ ನಿರ್ದೇಶಕರ ಸಭೆಯಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಕಲಬುರಗಿ ವಿಭಾಗದ ಎಲ್ಲಾ ನಿರ್ದೇಶಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಶ್ರೀಮತಿ ಮಂಜುಳಾ ಪಾಟೀಲರವರನ್ನು ಆತ್ಮೀಯವಾಗಿ ಸನ್ಮಾನಿಸಿದರು.

## ಪದ್ಮಶಾಲಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್‌ನ ನೂತನ ಶಾಖೆಯ ಉದ್ಘಾಟನೆ



ಪದ್ಮಶಾಲಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ.ನ ನೂತನ ಶಾಖೆಯು ಬೆಂಗಳೂರಿನ ಬಸವೇಶ್ವರನಗರದಲ್ಲಿ ದಿನಾಂಕ 24.04.2016ರಂದು ಮಹಾ ಲಕ್ಷ್ಮೀಪುರಂ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಕೆ, ಗೋಪಾಲಯ್ಯ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉಪ ಮಹಾ ಪೌರರಾದ ಶ್ರೀಮತಿ ಹೇಮಲತಾ ಗೋಪಾಲಯ್ಯನವರು ಉದ್ಘಾಟಿಸಿದರು.

ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್. ಕೃಷ್ಣಮೂರ್ತಿ, ಉಪಾಧ್ಯಕ್ಷರಾದ ಶ್ರೀಮತಿ ಬಿ. ಚಂದ್ರಮ್ಮ, ಸಹಕಾರಿಯ ನಿರ್ದೇಶಕರುಗಳು ಉಪಸ್ಥಿತರಿದ್ದರು.

## ಅಭಿನಂದನಾ ಸಮಾರಂಭ



ಶ್ರೀ ಶಿವಾಜಿ ಮಹಾರಾಜ ಕೋ–ಆಪರೇಟಿವ್ ಕ್ರೆಡಿಟ್ ಸೊಸಟಿಯು ಪ್ರಸಕ್ತ ಸಾಲಿನಲ್ಲಿ ರೂ.94.32 ಲಕ್ಷ ಲಾಭ ಗಳಿಸಿರುವುದಕ್ಕೆ ಸಂಘದ ಕಛೇರಿಯಲ್ಲಿ ಸಿಬ್ಬಂದಿಗಳಿಗೆ ಹಾಗೂ ಪಿಗ್ಮಿ ಏಜೆಂಟರಿಗೆ ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಗಿತ್ತು.

ಶ್ರೀ ಶಿವಾಜಿ ಮಹಾರಾಜರ ಕಂಚಿನ ಪುತ್ಥಳಿಗೆ ಪೂಜೆ ನೆರವೇರಿಸುವ ಮೂಲಕ ಉದ್ಘಾಟಿಸಲಾಯಿತು. ಸಂಘದ ಉಪಾಧ್ಯಕ್ಷರಾದ ಶ್ರೀ ಬಾಬುರಾವ ತರಸೆರವರು ಮಾತನಾಡಿ ಸಂಘವು ಸನ್ 2015–16ನೇ ಸಾಲಿನಲ್ಲಿ ರೂ.94.32 ಲಕ್ಷ ನಿವ್ವಳ ಲಾಭ ಗಳಿಸಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ಅರುಣ ವಿ. ಕದಂರರವರು ಮಾತನಾಡಿದ ಸಂಘವು ಪ್ರಸಕ್ತ ಸಾಲಿನಲ್ಲಿ ರೂ. 94.32 ಲಕ್ಷ ನಿವ್ವಳ ಲಾಭ ಗಳಿಸಲು ಸಂಘದ ಸದಸ್ಯರ ಸಹಕಾರ, ಆಡಳಿತ ಮಂಡಲಿಯವರ ನಿಸ್ವಾರ್ಥ ಸೇವೆ ಹಾಗೂ ಸಿಬ್ಬಂದಿ ಮತ್ತು ಪಿಗ್ಮಿ ಏಜೆಂಟರ ಪ್ರಾಮಾಣಿಕ ಪ್ರಯತ್ನವೇ ಕಾರಣ ಎಂದರು. ಸಂಘವು ಪ್ರಸಕ್ತ ಸಾಲಿನಲ್ಲಿ ರೂ. 1.86 ಕೋಟಿ ಶೇರು ಬಂಡವಾಳ, ರೂ. 1.38 ಕೋಟಿ ಕಾಯ್ದಿಟ್ಟ ನಿಧಿ, ರೂ. 31.52 ಕೋಟಿ ಠೇವುಗಳು, ರೂ. 37.43 ಕೋಟಿಗೂ ಮೀರಿ ದುಡಿಯುವ ಬಂಡವಾಳ ಹೊಂದಿದೆ ಎಂದರು.



ಶ್ರೀ ಮಹಾಗಣಪತಿ–ಮಹಾಸತಿ (ಎಮ್.ಜಿ.ಎಮ್) ಸೌಹಾರ್ದ ಪತ್ತಿನ ಸಹಕಾರಿ ನಿ., ಸರ್ಪನಕಟ್ಟೆ ಸಹಕಾರಿಯ ಇ–ಸ್ಟ್ಯಾಂಪಿಂಗ್ ಕೇಂದ್ರವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಈರಪ್ಪ ಮಂಜಪ್ಪ ನಾಯ್ಕ, ಉಪಾಧ್ಯಕ್ಷರಾದ ಶ್ರೀ ಸುರೇಶ ನಾಗಪ್ಪ ನಾಯ್ಕ ಹಾಗೂ ಎಲ್ಲಾ ನಿರ್ದೇಶಕರುಗಳಿಂದ ಪ್ರಾರಂಭ.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ

– ಸಂಪಾದಕರು

## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

– ಶ್ರೀಕಾಂತ ಬರುವೆ
ಸಹ ಪ್ರಧಾನ ವ್ಯವಸ್ಥಾಪಕರು,
ಕ.ರಾ.ಸೌ.ಸಂ.ಸ.ನಿ.,

**ಅಶ್ವತ್ಥಪುರ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು.**

**ಪ್ರಶ್ನೆ 1 : ಸಹಕಾರಿಯು ನೀಡುವ ಯಾವುದೇ ಸೇವೆ ತನ್ನ ಸದಸ್ಯರಿಗಷ್ಟೇ ಸೀಮಿತವಾಗಿರುತ್ತದೆ. ಸದಸ್ಯರಲ್ಲದವರೊಂದಿಗೆ ವ್ಯವಹಾರ ಮಾಡಲು ಅವಕಾಶ ಇರುವುದಿಲ್ಲ. ಸಹಕಾರಿಯ ಸಿಬ್ಬಂದಿಗಳು ಸಹ ಸದಸ್ಯರಾಗಿರುವುದಿಲ್ಲ. ಹಾಗಾಗಿ ಸದಸ್ಯರಂತೆಯೇ ಸಿಬ್ಬಂದಿಯವರಿಗೂ ಸೇವೆ ಅಂದರೆ ಠೇವಣಿ ಸ್ವೀಕಾರ ಮತ್ತು ಸಾಲ ನೀಡಿಕೆಯಂತಹ ಸೇವೆಗಳನ್ನು ಸಹಕಾರಿಯು ನೀಡಬಹುದೇ ಮತ್ತು ಸಿಬ್ಬಂದಿಗಳನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದೇ?**

**ಉತ್ತರ :** ಸಹಕಾರಿಯು ಕಡ್ಡಾಯವಾಗಿ ಸದಸ್ಯರೊಂದಿಗೆ ಮಾತ್ರ ವ್ಯವಹರಿಸಬೇಕಿರುತ್ತದೆ. ಸದಸ್ಯೇತರರೊಂದಿಗೆ ವ್ಯವಹರಿಸುವಂತಿಲ್ಲ. ಸಹಕಾರಿಯು ಠೇವಣಿಯನ್ನು ಸಹಕಾರಿಯ ಸದಸ್ಯರಿಂದ ಮಾತ್ರ ಸ್ವೀಕರಿಸಬೇಕಿರುತ್ತದೆ. ಸಹಕಾರಿಯ ಸಿಬ್ಬಂದಿಯಿಂದ ಠೇವಣಿ ಸ್ವೀಕರಿಸಬೇಕೆಂದಿದ್ದರೆ, ಅಂತಹ ಸಿಬ್ಬಂದಿಯನ್ನು ಸಹಕಾರಿಯ ಸದಸ್ಯನಾಗಿ ಮಾಡಿಕೊಳ್ಳಬೇಕಾಗುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20ರಲ್ಲಿ ಸಹಕಾರಿಯ ಸದಸ್ಯರು ಯಾರಾಗಬಹುದು ಎಂಬುದನ್ನು ಸ್ಪಷ್ಟವಾಗಿ ಹೇಳಲಾಗಿರುತ್ತದೆ. ಸದರಿ ಕಲಂನಲ್ಲಿ ಸಹಕಾರಿಯ ಸಿಬ್ಬಂದಿಯು ಸಹಕಾರಿಯ ಸದಸ್ಯನಾಗಲು ಯಾವುದೇ ನಿಷೇಧ/ನಿರ್ಬಂಧ ಇರುವುದಿಲ್ಲ. ಆದರೆ, ಒಂದುವೇಳೆ ಸಹಕಾರಿಯ ಉಪವಿಧಿ ಅಥವಾ ಸಹಕಾರಿಯು ರೂಪಿಸಿಕೊಂಡಿರುವ ಸಿಬ್ಬಂದಿಗಳ ಸೇವಾ ನಿಯಮದಲ್ಲಿ ಸಹಕಾರಿಯ ಸಿಬ್ಬಂದಿಯು ಸಹಕಾರಿಯ ಸದಸ್ಯನಾಗಲು ನಿಷೇಧ/ನಿರ್ಬಂಧವಿದ್ದಲ್ಲಿ, ಅಂತಹ ಸಹಕಾರಿಯ ಸಿಬ್ಬಂದಿಯು ಸದಸ್ಯನಾಗುವಂತಿಲ್ಲ.

**ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ**

**ಪ್ರಶ್ನೆ 2 : ಕರ್ನಾಟಕ ಸೌಹಾರ್ದ ಸಹಕಾರಿಯ ಅಧಿನಿಯಮ, 1997ರ ಪ್ರಕಾರ ಯಾವುದೇ ಒಂದು ಸಹಕಾರಿಯಲ್ಲಿ ಒಬ್ಬ ವ್ಯಕ್ತಿಯು ಯಾವುದೇ ವ್ಯವಹಾರ ಮಾಡಬೇಕಾದರೆ ಅಂತಹ ವ್ಯಕ್ತಿಯನ್ನು ಮೊದಲಿಗೆ ಸಹಕಾರಿಯ ಸದಸ್ಯರನ್ನಾಗಿ ಮಾಡಿಕೊಂಡಿರಬೇಕಾಗುತ್ತದೆ. ಆದರೆ, ಯಾವುದೇ ಒಬ್ಬ ವ್ಯಕ್ತಿ ಸದಸ್ಯತ್ವವನ್ನು ಮತ್ತು ಸಾಲವನ್ನು ಕೋರಿ ಅರ್ಜಿ ಸಲ್ಲಿಸಿದ ದಿನದಂದೇ ಸಾಲವನ್ನು ನೀಡಬೇಕೆಂದು ಕೋರಿದಾಗ ಅಂತಹ ವ್ಯಕ್ತಿ ಸಾಲ ನೀಡಿರುವ ದಿನದಂದು ಸದಸ್ಯತ್ವ ಮಾಡಿಕೊಂಡು ಸಾಲ ನೀಡಿದಾಗ ಸದರಿ ಸದಸ್ಯತ್ವದ ಬಗ್ಗೆ ಬರುವ ಮಾಸಿಕ ಆಡಳಿತ ಮಂಡಲಿಯ ಸಭೆಯಲ್ಲಿ ಅನುಮೋದನೆ ಪಡೆಯಬಹುದೇ ಅಥವಾ ಕಡ್ಡಾಯವಾಗಿ ಯಾವುದೇ ಒಬ್ಬ ವ್ಯಕ್ತಿಯ ಸದಸ್ಯತ್ವವನ್ನು ಮಾಸಿಕ ಮಂಡಲಿಯ ಸಭೆಯಲ್ಲಿ ಸದಸ್ಯತ್ವಕ್ಕೆ ಅನುಮತಿ ಪಡೆದುಕೊಂಡು ಸಾಲ ನೀಡಬೇಕೇ?**

**ಉತ್ತರ :** ಸಹಕಾರ ತತ್ವದ ಮೂಲ ಆಶಯ ಯಾವುದೇ ಒಬ್ಬ ವ್ಯಕ್ತಿ ಸ್ವಯಂ ಪ್ರೇರಣೆಯಿಂದ ಸಹಕಾರಿಯ ಸದಸ್ಯತ್ವವನ್ನು ಪಡೆದುಕೊಂಡು ಅಗತ್ಯವೆನಿಸಿದ ಸಂದರ್ಭದಲ್ಲಿ ಸಹಕಾರಿಯ ಸೇವೆಯನ್ನು ಪಡೆದುಕೊಳ್ಳಬೇಕಿರುತ್ತದೆಯೇ ಹೊರತು, ತನಗೆ ಅಗತ್ಯವೆನಿಸಿದ ಸಂದರ್ಭದಲ್ಲಿ ಸಹಕಾರಿಯ ಸದಸ್ಯತ್ವವನ್ನು ಪಡೆದುಕೊಂಡು ಸೇವೆಯನ್ನು ಪಡೆಯುವುದಲ್ಲ. ಅದೇ ರೀತಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997ರ ಕಲಂ 20(3)ರನ್ವಯ ಯಾವುದೇ ಒಬ್ಬ ವ್ಯಕ್ತಿಯ ಸದಸ್ಯತ್ವ ಅಂಗೀಕರಾವಾಗಬೇಕಿರುವುದು ಆಡಳಿತ ಮಂಡಲಿಯಲ್ಲಾಗಿರುತ್ತದೆ. ಆದರೆ, ತಾವು ತಿಳಿಸಿದಂತೆ ಯಾವುದೇ ಒಬ್ಬ ವ್ಯಕ್ತಿಯನ್ನು ಸದಸ್ಯನನ್ನಾಗಿ ಮಾಡಿಕೊಂಡು ತಕ್ಷಣ ಸಾಲ ನೀಡುವ ಸಂದರ್ಭವಿದ್ದಲ್ಲಿ, ಸಹಕಾರಿಯ ಆಡಳಿತ ಮಂಡಲಿಯು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನಿಗೆ ನಿರ್ದಿಷ್ಟಪಡಿಸಿದ ಷರತ್ತಿಗೊಳಪಟ್ಟು ತನ್ನ ಅಧಿಕಾರವನ್ನು ಪ್ರತ್ಯಾಯೋಜನೆ ಮಾಡಬಹುದಾಗಿರುತ್ತದೆ. ಪ್ರತ್ಯಾಯೋಜನೆಯ ಆದೇಶದಲ್ಲಿ ಸದಸ್ಯತ್ವಕ್ಕೆ ಸೇರಿಕೊಳ್ಳಬಹುದಾದ ಸದಸ್ಯತ್ವದ ಷರತ್ತುಗಳನ್ನು ವಿಧಿಸಬಹುದಾಗಿದ್ದು, ಸದರಿ ಷರತ್ತಿಗೊಳಪಟ್ಟು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಸದಸ್ಯತ್ವಕ್ಕೆ ವ್ಯಕ್ತಿಗಳನ್ನು ಸೇರಿಸಿಕೊಳ್ಳಬಹುದಾಗಿರುತ್ತದೆ.

### ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಾರ್ವಜನಿಕ ಪ್ರಾಧಿಕಾರ ಅಲ್ಲ

### ಮಾಹಿತಿ ಹಕ್ಕು ಕಾಯ್ದೆಯು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಅನ್ವಯಿಸುವುದಿಲ್ಲ

## ಕರ್ನಾಟಕ ಮಾಹಿತಿ ಆಯೋಗದ ಆದೇಶ

ಶ್ರೀ ಉಮಾಪತಿ ಎಸ್ ಇವರು ಕ್ರ.ಸಂ ಕಮಾಆ 3378 ಸಿಒಎಂ 2014 ಪ್ರಕಾರ ಕರ್ನಾಟಕ ಮಾಹಿತಿ ಆಯೋಗದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದು ಸಾರ್ವಜನಿಕ ಸಂಸ್ಥೆ. ಆದ್ದರಿಂದ, ಇದು ಸಾರ್ವಜನಿಕ ಪ್ರಾಧಿಕಾರ ಆಗುತ್ತದೆ ಮತ್ತು ಮಾಹಿತಿ ಹಕ್ಕು ಕಾಯ್ದೆಗೆ ಒಳಪಡುತ್ತದೆ ಎಂದು ಪ್ರಕರಣ ದಾಖಲಿಸಿದ್ದರು. ಈ ಪ್ರಕರಣವನ್ನು ಕೈಗೆತ್ತಿಕೊಂಡ ಮಾಹಿತಿ ಆಯೋಗವು ಸಹಕಾರ ಸಂಘಗಳ ನಿಬಂಧಕರ ಪ್ರತಿನಿಧಿ ದಿನಾಂಕ 16–12–2015 ದಿನಾಂಕ 02–05–2015 ಹಾಗೂ ದಿನಾಂಕ 23–09–2015 ರಂದು ಆಯೋಗವು ಪ್ರಕರಣದ ವಿಚಾರಣೆ ನಡೆಸಿದೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸುವಂತೆ ನಿಬಂಧಕರನ್ನು ಕೇಳಲಾಗಿತ್ತು. ನಿಬಂಧಕರು ಸಂಯುಕ್ತ ಸಹಕಾರಿಯು ಒದಗಿಸಿದ ದಾಖಲೆಗಳನ್ನು ಪರಿಶೀಲಿಸಿ, ಮಾಹಿತಿಗಳನ್ನು ಆಯೋಗಕ್ಕೆ ಒದಗಿಸಿದ ನಂತರ ಮಾಹಿತಿ ಆಯೋಗವು ಪ್ರಕರಣವನ್ನು ಅವಲೋಕಿಸಿ, ದಿನಾಂಕ 30–01–2016ರಲ್ಲಿ "ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 2 (ಹೆಚ್) ರಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರ ಆಗುವುದಿಲ್ಲವೆಂದು ತೀರ್ಮಾನಿಸಿ, ಪ್ರಕರಣವನ್ನು ವಿಲೇವಾರಿ ಮಾಡಿದೆ. ಆದ್ದರಿಂದ, ಮಾಹಿತಿ ಕಾಯ್ದೆಯು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಅನ್ವಯಿಸುವುದಿಲ್ಲ. ಈ ಆದೇಶದ ಪೂರ್ಣ ವಿವರಗಳು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coopನಲ್ಲಿ ಲಭ್ಯವಿರುತ್ತದೆ.

## ಕಗ್ಗ ಪದ್ಯಗಳಲ್ಲಿ ಸಹಕಾರ "ಸಾರ", "ಬಿಡಿಯಾದರೆ ಅಳಿದೇವು", "ಇಡಿಯಾದರೆ ಉಳಿದೇವು"

**ಎಂ.ಬಸಪ್ಪ,** ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ)

ನಾನು ಓದಿದ ಪುಸ್ತಕಗಳಲ್ಲಿ ನನ್ನನ್ನು ಬಹಳ ಹಾಗೂ ತೀಕ್ಷ್ಣವಾಗಿ ಆಕರ್ಷಿಸಿದ ಪುಸ್ತಕವೆಂದರೆ ಡಿವಿಜಿಯವರ ಮಂಕುತಿಮ್ಮನ ಕಗ್ಗ. ಇದು ಭಗವದ್ಗೀತೆ, ಬ್ರಹ್ಮಸೂತ್ರ ಹಾಗೂ ಉಪನಿಷತ್ತುಗಳ ತ್ರಿವೇಣಿ ಸಂಗಮ. ಇದರಲ್ಲಿ ಜೀವನದ ಸಾರಸರ್ವಸ್ವವಿದೆ. ಇವರ ಪದ್ಯಗಳಲ್ಲಿ ಧರ್ಮ, ರಾಜನೀತಿ, ಪ್ರಕೃತಿ ವರ್ಣನೆ, ಮನಸ್ಸಿನ ನಡೆಯ ಚಂಚಲತೆ, ಕುಟಿಲತೆ, ರಾಮಾಯಣ, ಮಹಾಭಾರತದ ಉಲ್ಲೇಖ ಇತ್ಯಾದಿ ಹಲವು ವಿನ್ಯಾಸಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಇವುಗಳಲ್ಲಿ ಸಹಕಾರಕ್ಕೆ ಸಂಬಂಧಿಸಿದ ಕೆಲವು ಪದ್ಯಗಳನ್ನು ಸಹಕಾರಿಗಳು ಗಮನಸಲಿ ಎಂದು ಪ್ರಕಟಿಸಲಾಗುತ್ತಿದೆ.

ಸೃಷ್ಟಿ, ಸ್ಥಿತಿ, ಲಯ ಕರ್ತನಾದ ಭಗವಂತನು ಇತರೇ ಜೀವರಾಶಿಗಳಿಗಿಂತ ಮಾನವನನ್ನು ವಿಭಿನ್ನವಾಗಿ ಹಾಗೂ ಉತ್ಕೃಷ್ಟ ಸೃಷ್ಟಿಯನ್ನಾಗಿ ರಚಿಸಿ ಇವನನ್ನು ಸೃಷ್ಟಿಶೈಲದ ಶಿಖರವೆಂದೇ ಕರೆದಿದ್ದಾರೆ. ಇಂತಹ ಪರಮೋತ್ಕೃಷ್ಟ ಸೃಷ್ಟಿಯಾದ ಮಾನವ, ಸಮಾಜದಲ್ಲಿಯೂ ಉದಾಹರಣಾರ್ಥವಾಗಿ, ಸತ್ಸಂಪ್ರದಾಯಿಯಾಗಿ ಹಾಗೂ ಸಹಕಾರಿಯಾಗಿ ಬಾಳಬೇಕೆಂಬುದೇ ಜೀವನದ ಹೆಗ್ಗುರಿಯಾಗಬೇಕಾಗಿದೆ.

ಸಹಕಾರ ಉಗಮದ ಒಂದೆರಡು ತುಣುಕುಗಳನ್ನು ನೋಡೋಣ. "ಒಬ್ಬನು ಎಲ್ಲರಿಗಾಗಿ", "ಎಲ್ಲರೂ ಎಲ್ಲರಿಗಾಗಿ", "ಬಿಡಿಯಾದರೆ ಅಳಿದೇವು", "ಇಡಿಯಾದರೆ ಉಳಿದೇವು", ಒಗ್ಗಟ್ಟಿನಲ್ಲಿ ಒಲವಿದೆ ಬಲವಿದೆ", "ಸರ್ವರ ಅಭಿವೃದ್ಧಿ ಸಹಕಾರದಿಂದ", "ಹನಿಹನಿಗೂಡಿದರೆ ಹಳ್ಳ ತೆನೆತೆನೆಗೂಡಿದರೆ ಬಳ್ಳ" ಎಂಬ ಧ್ಯೇಯ ವಾಕ್ಯಗಳು ಸಹಕಾರದ ತಳಹದಿ ವಾಕ್ಯಗಳಾಗಿವೆ. ಅರಣ್ಯದಲ್ಲಿ ಹಾರಾಡುವ ಹಕ್ಕಿ ಪಕ್ಷಿ, ಜೇನು, ಓಡಾಡುವ ಇರುವೆ, ಆನೆಗಳು ಇತ್ಯಾದಿ ಮೃಗಗಳನ್ನು ವೀಕ್ಷಿಸಿದ ಮಾನವ ತಾನೂ ಸಹ ಸಹಕಾರ ಜೀವನವನ್ನು ಒಗ್ಗೂಡಿಸಿಕೊಳ್ಳಬೇಕೆಂಬ ಮನಸ್ಸು ಮಾಡಿದ. ಅದೇಕೋ ಪ್ರಾಣಿ ಪಕ್ಷಿ ಸಂಕುಲದಷ್ಟು ಸಹಕಾರ ಪ್ರಗತಿಯನ್ನು ಮಾನವ ಸಾಧಿಸಿಲ್ಲವೆಂದೋ ಏನೋ ಡಿವಿಜಿಯವರು "ಒಟ್ಟುಬಾಳ್ವುದ ಕಲಿಯೋ" ಸಂದೇಶ ನೀಡಿಕೆಯ ಈ ಚಮತ್ಕಾರದ ಪದ್ಯವನ್ನು ನೀಡಿದ್ದಾರೆ:

**"ಪ್ರತ್ಯೇಕ ಸುಖವದಲ್ಪದುದು, ಗಳಿಗೆ ತೋರ್ಕೆಯದು**
**ಆತ್ಮ ವಿಸ್ತಾರವಾಗಿಪುದೆ ನಿತ್ಯಸುಖ**
**ವ್ಯಕ್ತಿ ಜೀವನದ ಸೊಂಪು ಸಮಷ್ಟಿ ಜೀವನದಿಂ**
**ಒಟ್ಟು ಬಾಳ್ವುವ ಕಲಿಯೋ ಮಂಕುತಿಮ್ಮ"॥**

ತಾನೊಬ್ಬನೇ ಸುಖವಾಗಿರಬೆಂಕೆಂದು ಬಯಸುವುದು ಬಹು ಸಣ್ಣದಾದ ವಿಚಾರ. ಒಂದು ಗಳಿಗೆಯ ತೋರಿಕೆಯಷ್ಟೆ. ನಮಗೆ ನಿತ್ಯಸುಖ ಬೇಕೆನಿಸಿದರೆ ನಮ್ಮ ಆತ್ಮ ವಿಸ್ತಾರವಾಗಬೇಕು, ಒಬ್ಬ ಮನುಷ್ಯನ ಜೀವನದ ಸೊಗಸು ಎಲ್ಲರ ಸುಖಮಯ (ಸಮಷ್ಠಿ) ಜೀವನದಿಂದ. ಆದ್ದರಿಂದ, ಸೇರಿ, ಕೂಡಿ ಬಾಳುವುದನ್ನು ಕಲಿ ಅಂದರೆ ಸಹಕಾರವನ್ನು ಮೈಗೂಡಿಸಿಕೋ ಹಾಗೂ ಸಹಕಾರ ಸುಖಜೀವನದ ಅಡಿಪಾಯ ಎಂಬ ಸಂದೇಶವನ್ನು ನೀಡುವ ಪದ್ಯವಿದಾಗಿದೆ.

# 2016–17ನೇ ಸಾಲಿಗೆ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯನ್ನು ಮುಂದುವರೆಸಲು ಹಾಗೂ ಹೊಸ ಸದಸ್ಯರುಗಳನ್ನು ನೋಂದಾಯಿಸಲು ಆದೇಶ

**ಸರ್ಕಾರಿ ಆದೇಶ ಸಂಖ್ಯೆ: ಸಿಒ/163/ಸಿಎಲ್ಎಸ್/2015 ಬೆಂಗಳೂರು ದಿನಾಂಕ : 15–04–2016**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನಲೆಯಲ್ಲಿ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಲ್ಲಿ 2016–17ನೇ ಸಾಲಿನಲ್ಲಿ ನೋಂದಾಯಿಸಿಕೊಳ್ಳಲು ಅನುವಾಗುವಂತೆ ಆದೇಶವನ್ನು ಹೊರಡಿಸಲಾಗಿದೆ.

## ಆದೇಶದ ಪ್ರಮುಖ ಅಂಶಗಳನ್ನು ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ

- ಸಹಕಾರ ಸಂಘಗಳ ಉಪ ನಿಬಂಧಕರು ಈ ಕೆಳಕಂಡ ಸಹಕಾರ ಸಂಘಗಳ ಯಾದಿ ತಯಾರಿಸಬೇಕು.

ಅ) ಪಟ್ಟಣ ಸಹಕಾರ ಬ್ಯಾಂಕುಗಳು, ಸೌಹಾರ್ದ ಸಹಕಾರಿಗಳು, ಮತ್ತು ನೌಕರರೇತರ ಸಹಕಾರ ಸಂಘಗಳಲ್ಲದೆ, ವಕೀಲರ ಸಹಕಾರ ಸಂಘಗಳು, ಪತ್ರಕರ್ತರ ಸಹಕಾರ ಸಂಘಗಳು, ಮಂಗಳಮುಖಿಯರ ಸಹಕಾರ ಸಂಘಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು, ಮಹಿಳಾ ಸಹಕಾರ ಸಂಘಗಳು, ಲೈಂಗಿಕ ಕಾರ್ಯಕರ್ತೆಯರ ಸಹಕಾರ ಸಂಘಗಳು, ಆಟೋಚಾಲಕರ ಸಹಕಾರ ಸಂಘಗಳು, ವಾಹನ ಚಾಲಕರ ಸಹಕಾರ ಸಂಘಗಳು, ಕಟ್ಟಡ ನಿರ್ಮಾಣ ಕೆಲಸಗಾರರ ಸಹಕಾರ ಸಂಘಗಳು, ಹೋಟೆಲ್ ಕೆಲಸಗಾರರ ಸಹಕಾರ ಸಂಘಗಳು. ಪಟ್ಟಣಗಳಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಸಹಕಾರ ಸಂಘಗಳನ್ನು ಕೈಬಿಡದೆ ಗುರುತಿಸಿ ಅಂತಹ ಸಹಕಾರ ಸಂಘಗಳನ್ನು ಪಟ್ಟಿ ಮಾಡಿ ಅಂತಹ ಸಹಕಾರ ಸಂಘಗಳಿಂದಲೂ ನಗರ ಯಶಸ್ವಿನಿ ಯೋಜನೆಗೆ ಸದಸ್ಯರನ್ನಾಗಿ ಮಾಡಲು ಕ್ರಮ ವಹಿಸಬೇಕು.

ಆ) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಎಲ್ಲಾ ನಗರ ಪ್ರದೇಶದಲ್ಲಿರುವ ಸ್ವ–ಸಹಾಯ ಗುಂಪುಗಳ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರೂ ಸಹ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಲ್ಲಿ ನೋಂದಾಯಿಸಿಕೊಳ್ಳಲು ಅರ್ಹರಿರುತ್ತಾರೆ, ಆದರೆ ಅಂತಹ ಸ್ವಸಹಾಯ ಗುಂಪುಗಳ ರಚನೆಯಾಗಿ 3 ತಿಂಗಳು ಗತಿಸಿರಬೇಕು.

- 2016–17ನೇ ಸಾಲಿಗೆ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಡಿ ವಾರ್ಷಿಕ ವಂತಿಗೆಯನ್ನು ಪ್ರತಿಯೊಬ್ಬರಿಗೆ ರೂ.710/–ಕ್ಕೆ ನಿಗಧಿಗೊಳಿಸಲಾಗಿದೆ. ಈ ಯೋಜನೆಯ ಪ್ರಯೋಜನ ಪಡೆಯಲು ಉದ್ದೇಶಿಸುವ ಪ್ರತಿಯೊಬ್ಬರು ರೂ.710/– ರಂತೆ ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಕಡ್ಡಾಯವಾಗಿ ಪಾವತಿ ಮಾಡಬೇಕು. ಈ ಪೈಕಿ ರೂ.10/–ನ್ನು ಸಂಘದ ಸಾದಿಲ್ವಾರು ವೆಚ್ಚಕ್ಕೆ ಮತ್ತು ಯಶಸ್ವಿನಿ ಸದಸ್ಯರುಗಳನ್ನು ನೋಂದಾಯಿಸಲು ಶ್ರಮಿಸಿದವರಿಗೆ ಪ್ರೋತ್ಸಾಹ ಧನವಾಗಿ ಸಹಕಾರ ಸಂಘ/ ಸಂಸ್ಥೆಯು ಇಟ್ಟುಕೊಂಡು, ಉಳಿದ ರೂ.700/–ಗಳನ್ನು ಹಣ ಸ್ವೀಕರಿಸಿದ 15 ದಿನಗಳೊಳಗಾಗಿ ಸಂಬಂಧಿಸಿದ ಜಿಲ್ಲಾ ಸಹಕಾರ ಬ್ಯಾಂಕುಗಳಲ್ಲಿ ಯಶಸ್ವಿನಿ ಟ್ರಸ್ಟ್ ಹೊಂದಿರುವ ನಗರ ಯಶಸ್ವಿನಿ ಖಾತೆಗೆ ಜಮಾ ಮಾಡತಕ್ಕದ್ದು/ವರ್ಗಾಯಿಸತಕ್ಕದ್ದು. ವಿಳಂಬವಾದಲ್ಲಿ ಆ ಹಣವನ್ನು ಇಟ್ಟುಕೊಂಡ ಸಹಕಾರ ಸಂಘ/ಸಂಸ್ಥೆಯವರು ಬ್ಯಾಂಕಿನ ನಿಯಮಗಳ ಪ್ರಕಾರ ವಿಳಂಬದ ಅವಧಿಗೆ ಬಡ್ಡಿ ಪಾವತಿ ಮಾಡಲು ಬದ್ಧರಾಗುತ್ತಾರೆ. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರು ರೂ. 110/– ಮಾತ್ರ ಪಾವತಿಸಬೇಕು ಉಳಿದ ರೂ. 600/–ಗಳನ್ನು ಸರ್ಕಾರದಿಂದ ಸಹಾಯಧನವಾಗಿ ಪಾವತಿಸಲಾಗುವುದು.

- 2016–17ನೇ ಸಾಲಿಗೆ ನಗರ ಯಶಸ್ವಿನಿ ಸದಸ್ಯರುಗಳನ್ನು ನೋಂದಾಯಿಸುವ ಕಾರ್ಯಕ್ರಮವನ್ನು ಈ ಕೆಳಗಿನಂತೆ ನಿಗಧಿಗೊಳಿಸಲಾಗಿದೆ.

ಅ) ಯಶಸ್ವಿನಿ ಸದಸ್ಯರ ನೋಂದಣಿ / ನವೀಕರಣ ಪ್ರಾರಂಭದ ದಿನಾಂಕ:20.04.2016

ಆ) ಯಶಸ್ವಿನಿ ಸದಸ್ಯರ ನೋಂದಣಿ / ನವೀಕರಣ ಕೊನೆಯ ದಿನಾಂಕ: 31.05.2016.

- 2016–17ನೇ ಸಾಲಿನಲ್ಲಿ ಯಶಸ್ವಿನಿ ಸದಸ್ಯರುಗಳನ್ನು ಹೊಸದಾಗಿ ನೋಂದಾಯಿಸಲು 2015–16ನೇ ಸಾಲಿನಲ್ಲಿ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಗಾಗಿ ಸರಬರಾಜು ಮಾಡಿರುವ ಹೊಸ ನೋಂದಣಿ ಫಾರಂಗಳನ್ನು ಮಾತ್ರ ಉಪಯೋಗಿಸಬೇಕು ಮತ್ತು ಗುರುತಿನ ಚೀಟಿ ಒದಗಿಸಬೇಕು. ಬೇರೆ ಯಾವುದೇ ವರ್ಷಗಳಲ್ಲಿ ನೀಡಿರುವ ಫಾರಂಗಳನ್ನು ಉಪಯೋಗಿಸತಕ್ಕದ್ದಲ್ಲ.
- ಅರ್ಹ ಸಹಕಾರ ಸಂಘಗಳು ಸದಸ್ಯರುಗಳಿಂದ ನಿಗದಿತ ವಾರ್ಷಿಕ ವಂತಿಗೆ ಹಣ ಪಡೆದು ಸಂಘದ ಹಣ ಸ್ವೀಕೃತಿ ರಶೀದಿಯನ್ನು ಕೊಡಬೇಕು. ಫಾರಂನಲ್ಲಿ ಸದಸ್ಯರನ್ನು ನೋಂದಾಯಿಸಿದ ದಿನಾಂಕವನ್ನು ತಪ್ಪದೆ ನಮೂದಿಸಬೇಕು. ನೋಂದಣಿ ಫಾರಂನ ಕೆಳಭಾಗವನ್ನು ಸದಸ್ಯರಿಗೆ ಕೊಡಬೇಕು. ಮೇಲ್ಭಾಗವನ್ನು ಡಾಟಾ ಎಂಟ್ರಿ ಮಾಡಲು ಸಂಬಂಧಿಸಿದ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಿಗೆ ಪ್ರತಿ ತಿಂಗಳ ಕೊನೆಯಲ್ಲಿ ಸಂಗ್ರಹಿಸಿದ ವಂತಿಗೆಯ ಹಣವನ್ನು ಬ್ಯಾಂ–ಕಿಗೆ ಜಮೆ ಮಾಡಿ ರಶೀದಿಯೊಂದಿಗೆ ಕಳುಹಿಸಬೇಕು ಮತ್ತು ಆಗಿಂದಾಗ್ಗೆ ಡಾಟಾ ಎಂಟ್ರಿ ಮಾಡಲು ಅನುಕೂಲವಾಗುವಂತೆ ಪ್ರತಿತಿಂಗಳ ಕೊನೆಯಲ್ಲಿ ಹೊಸ ನೋಂದಣಿ ಅರ್ಜಿ/ನವೀಕರಣದ ವಿವರಗಳನ್ನು ಅಂದರೆ ಹೊಸ ಅರ್ಜಿಗಳಲ್ಲಿ ಸದಸ್ಯರುಗಳ ಫೋಟೋ ಅಂಟಿಸಿ, ಎಲ್ಲಾ ವಿವರಗಳೊಂದಿಗೆ ಹೊಸದಾಗಿ ನೋಂದಾಯಿಸಿದ ಮತ್ತು ನವೀಕರಣವಾದ ಸದಸ್ಯರುಗಳ ತಃಖ್ತೆಯೊಂದಿಗೆ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಗೆ ನೀಡಿ ಸ್ವೀಕೃತಿ ಪಡೆಯಬೇಕು.
- 2016–17ನೇ ಸಾಲಿನಲ್ಲಿ ಹೊಸದಾಗಿ ನೋಂದಾಯಿಸುವವರಿಗೆ ಹೊಸ ಕಾರ್ಡುಗಳನ್ನು ಕೊಡಲಾಗುವುದು. ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಸದಸ್ಯರ ಎರಡು ಭಾವಚಿತ್ರಗಳನ್ನು ತಂದು ಕಛೇರಿ ಪ್ರತಿ ಮತ್ತು ಸದಸ್ಯರ ಪ್ರತಿಯ ಹಿಂಭಾಗದಲ್ಲಿ ಅರ್ಜಿ ಫಾರಂನಲ್ಲಿ ಕ್ರಮ ಸಂಖ್ಯೆ ಅನುಗುಣವಾಗಿ ಫೋಟೋಗಳನ್ನು ಅಂಟಿಸಿ ಭಾವಚಿತ್ರದ ಕೆಳಗೆ ಅವರ ಹೆಸರನ್ನು ಬರೆಯಬೇಕು.
- 2016–17ನೇ ಸಾಲಿನ ಯಶಸ್ವಿನಿ ಯೋಜನೆಯ ಅವಧಿಯು ದಿನಾಂಕ: 01–06–2016 ರಿಂದ ಪ್ರಾರಂಭವಾಗಿ 31–05–2017ಕ್ಕೆ ಮುಗಿಯುತ್ತದೆ. ಆದ ಕಾರಣ ಈ ಸುತ್ತೋಲೆ ಅನ್ವಯ ಹೊಸದಾಗಿ ನೋಂದಾವಣೆಯಾಗುವ/ಸೇರ್ಪಡೆಯಾಗುವ ಫಲಾನುಭವಿಗಳು ಯಶಸ್ವಿನಿ ಯೋಜನೆಯ ಸೌಲಭ್ಯವನ್ನು ದಿನಾಂಕ:01.06.2016 ರಿಂದ ಜಾರಿಗೆ ಬರುವಂತೆ ಮಾತ್ರ ಪಡೆಯಲು ಅರ್ಹರಾಗುತ್ತಾರೆ. ಆದ್ದರಿಂದ ಸಹಕಾರ ಸಂಘಗಳು ನೀಡುವ ವಂತಿಗೆ ಹಣ ಸ್ವೀಕೃತಿ ರಶೀದಿ/ಫಲಾನುಭವಿಗೆ ನೀಡುವ ನೋಂದಣಿ ನಮೂನೆ ಭಾಗದ ಪ್ರತಿಯಲ್ಲಿ ಈ ಮೇಲಿನ ಅಂಶವನ್ನು ಸ್ಪಷ್ಟವಾಗಿ ಬರೆಯಬೇಕು ಮತ್ತು ತಿಳುವಳಿಕೆಯನ್ನು ಕೂಡ ಫಲಾನುಭವಿಗೆ ನೀಡಬೇಕು.

**ಆದೇಶದ ಪೂರ್ಣ ವಿವರಗಳು ಸಹಕಾರಿಯ www.souharda.coop ವೆಬ್‌ಸೈಟ್‌ನಲ್ಲಿ ಲಭ್ಯವಿದೆ.**

# 2016–17ನೇ ಸಾಲಿಗೆ ಯಶಸ್ವಿನಿ ಸಹಕಾರ ರೈತರ ಆರೋಗ್ಯ ರಕ್ಷಣಾ ಯೋಜನೆಯನ್ನು ಮುಂದುವರೆಸಲು ಹಾಗೂ ಹೊಸ ಸದಸ್ಯರುಗಳನ್ನು ನೋಂದಾಯಿಸಲು ಆದೇಶ

**ಸರ್ಕಾರಿ ಆದೇಶ ಸಂಖ್ಯೆ : ಸಿಒ/162/ಸಿಎಲ್‌ಎಸ್/2015 ಬೆಂಗಳೂರು ದಿನಾಂಕ : 15–04–2016**

**ಆದೇಶದ ಪ್ರಮುಖ ಅಂಶಗಳನ್ನು ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಯಶಸ್ವಿನಿ ಸಹಕಾರ ರೈತರ ಆರೋಗ್ಯ ರಕ್ಷಣಾ ಯೋಜನೆಯಲ್ಲಿ 2016–17ನೇ ಸಾಲಿನಲ್ಲಿ ಗ್ರಾಮೀಣ ಸಹಕಾರ ಸಂಘದ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರು ನೋಂದಾಯಿಸಲು ಅನುವಾಗುವಂತೆ ಆದೇಶವನ್ನು ಹಾಗೂ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

- 2016–17ನೇ ಸಾಲಿಗೆ ಗ್ರಾಮೀಣ ಯಶಸ್ವಿನಿ ಸದಸ್ಯರುಗಳನ್ನು ನೋಂದಾಯಿಸುವ ಕಾರ್ಯಕ್ರಮವನ್ನು ಈ ಕೆಳಗಿನಂತೆ ನಿಗದಿಗೊಳಿಸಲಾಗಿದೆ.
  ಅ) ಯಶಸ್ವಿನಿ ಸದಸ್ಯರ ನೋಂದಣಿ / ನವೀಕರಣ ಪ್ರಾರಂಭದ ದಿನಾಂಕ : 20.04.2016
  ಆ) ಯಶಸ್ವಿನಿ ಸದಸ್ಯರ ನೋಂದಣಿ / ನವೀಕರಣ ಕೊನೆಯ ದಿನಾಂಕ : 31.05.2016.
- 2016–17ನೇ ಸಾಲಿನಲ್ಲಿ ಯಶಸ್ವಿನಿ ಸದಸ್ಯರುಗಳನ್ನು ಹೊಸದಾಗಿ ನೋಂದಾಯಿಸಲು 2015–16ನೇ ಸಾಲಿನಲ್ಲಿ ಯಶಸ್ವಿನಿ ಸಹಕಾರ ರೈತರ ಆರೋಗ್ಯ ರಕ್ಷಣಾ ಯೋಜನೆಗಾಗಿ ಸರಬರಾಜು ಮಾಡಿರುವ ಹೊಸ ನೋಂದಣಿ ಫಾರಂಗಳನ್ನು ಮಾತ್ರ ಉಪಯೋಗಿಸಬೇಕು ಮತ್ತು ಗುರುತಿನ ಚೀಟಿ ಒದಗಿಸಬೇಕು. ಬೇರೆ ಯಾವುದೇ ವರ್ಷಗಳಲ್ಲಿ ನೀಡಿರುವ ಫಾರಂಗಳನ್ನು ಉಪಯೋಗಿಸತಕ್ಕದ್ದಲ್ಲ.

ಮೊದಲು 2015–16ನೇ ಸಾಲಿನಲ್ಲಿ ಸರಬರಾಜಿನಲ್ಲಿ ಉಳಿದ ಫಾರಂಗಳನ್ನು ಉಪಯೋಗಿಸಬೇಕು, ಆನಂತರ ಟ್ರಸ್ಟ್‌ನಿಂದ 2016–17ನೇ ಸಾಲಿಗೆ ಸರಬರಾಜು ಮಾಡಿದ ನೋಂದಣಿ ಫಾರಂಗಳನ್ನು ಉಪಯೋಗಿಸಬೇಕು. ಹಳೇ ಫಾರಂಗಳನ್ನು ಉಪಯೋಗಿಸುವಾಗ ಈ ವರ್ಷದ ವಾರ್ಷಿಕ ವಂತಿಗೆಯನ್ನು ಹಳೆ ನೋಂದಣಿ ಫಾರಂನ ಎರಡು ಭಾಗಗಳಲ್ಲಿ ತಿದ್ದುಪಡಿ ಮಾಡಿ ಸಹಕಾರ ಸಂಘಗಳ ಕಾರ್ಯದರ್ಶಿಗಳು ಸಹಿ ಮಾಡಬೇಕು. ಈ ವರ್ಷದ ನೋಂದಣಿಗೆ ಬೇಕಾದ ಅವಶ್ಯಕ ಸಂಖ್ಯೆಯ ಫಾರಂಗಳನ್ನು ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರುಗಳು ಟ್ರಸ್ಟ್ ಕಛೇರಿಯಿಂದ ಪಡೆದು ಅವರ ವ್ಯಾಪ್ತಿಯ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ಫಾರಂ/ಪುಸ್ತಕಗಳನ್ನು ಹಂತಹಂತವಾಗಿ ಪೂರೈಸಿ ಸ್ವೀಕೃತಿ ಪಡೆಯಬೇಕು. ಒಮ್ಮೆ ಪೂರೈಸಿದ ಫಾರಂಗಳಲ್ಲಿ ಸಹಕಾರ ಸಂಘದವರು ಮಾಹಿತಿಯನ್ನು ಪೂರ್ತಿಯಾಗಿ ನಮೂದಿಸಿ ವಂತಿಗೆ ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದ ನಂತರವೇ ಪುನಃ ಫಾರಂಗಳನ್ನು ಒದಗಿಸಬೇಕು. ಸಹಕಾರ ಸಂಘಕ್ಕೆ ಫಾರಂ ಪೂರೈಸುವಾಗ ಪುಸ್ತಕದ ಸಂಖ್ಯೆ ಮತ್ತು ಯುನಿಕ್ ಐ.ಡಿ ಸಂಖ್ಯೆಯನ್ನು ನಮೂದಿಸಿ ಕಾರ್ಯದರ್ಶಿಯಿಂದ ಸ್ವೀಕೃತಿ ಪಡೆದುಕೊಳ್ಳಬೇಕು. ಈ ಬಗ್ಗೆ ಪರಿಶೀಲನೆಗಾಗಿ ಪ್ರತ್ಯೇಕ ಪುಸ್ತಕದಲ್ಲಿ ಬರೆದಿಟ್ಟಿರಬೇಕು. ನವೀಕರಣಕ್ಕಾಗಿ ವೆಬ್‌ಸೈಟ್‌ನಲ್ಲಿರುವ ಫಾರಂನ್ನು ಉಪಯೋಗಿಸಬೇಕು. ನವೀಕರಿಸಿದವರಿಗೆ ಹೊಸದಾಗಿ ಐಡಿ ಕಾರ್ಡ್ ಕೊಡತಕ್ಕದ್ದಲ್ಲ, ಅವರಿಗೆ ಹಣಪಾವತಿಸಿದ್ದಕ್ಕೆ ರಶೀತಿ ಕೊಟ್ಟು, ರಶೀತಿಯಲ್ಲಿ ಈಗಾಗಲೇ ಕೊಟ್ಟಿರುವ ಕಾರ್ಡ್‌ನ ಯುನಿಕ್ ಐಡಿ ನಂಬರನ್ನು ನಮೂದಿಸಬೇಕು. ಸಹಕಾರ ಸಂಘಗಳ ಕಾರ್ಯದರ್ಶಿಗಳು ನವೀಕರಣಕ್ಕಾಗಿ ಭರ್ತಿ ಮಾಡಿದ ಮತ್ತು ಹೊಸದಾಗಿ ನೋಂದಾಯಿಸಲು ಭರ್ತಿ ಮಾಡಿದ ಫಾರಂಗಳ ಕಛೇರಿ ಪ್ರತಿಯನ್ನು ಡಾಟಾ ಎಂಟ್ರಿಗೆ ಕಳುಹಿಸಬೇಕು.

- 2016–17ನೇ ಸಾಲಿನಲ್ಲಿ ಹೊಸದಾಗಿ ನೋಂದಾಯಿಸುವವರಿಗೆ ಹೊಸ ಕಾರ್ಡುಗಳನ್ನು ಕೊಡಲಾಗುವುದು. ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಸದಸ್ಯರ ಎರಡು ಭಾವಚಿತ್ರಗಳನ್ನು ತಂದು ಕಛೇರಿ ಪ್ರತಿ ಮತ್ತು ಸದಸ್ಯರ ಪ್ರತಿಯ ಹಿಂಭಾಗದಲ್ಲಿ ಅರ್ಜಿ ಫಾರಂನಲ್ಲಿ ಕ್ರಮ ಸಂಖ್ಯೆ ಅನುಗುಣವಾಗಿ ಫೋಟೋಗಳನ್ನು ಅಂಟಿಸಿ ಭಾವಚಿತ್ರದ ಕೆಳಗೆ ಅವರ ಹೆಸರನ್ನು ಬರೆಯಬೇಕು.
- ಈಗಾಗಲೇ ಕಾರ್ಡ್ ಹೊಂದಿರುವವರು ನವೀಕರಣ ಸಂದರ್ಭದಲ್ಲಿ ವಂತಿಗೆ ತುಂಬಿ ಹೊಸದಾಗಿ ಸದಸ್ಯರನ್ನು ಸೇರಿಸಲು ಬಯಸಿದ್ದಲ್ಲಿ, ಪ್ರಧಾನ ಅರ್ಜಿದಾರರಿಗೆ ನೀಡಿರುವ ಕಾರ್ಡಿನಲ್ಲಿ ಹೊಸ ವ್ಯಕ್ತಿಯ ಮಾಹಿತಿಯನ್ನು ಮುಖಪುಟದಲ್ಲಿ ಬರೆದು ಹಿಂಬದಿಯಲ್ಲಿ ಫೋಟೋ ಅಂಟಿಸಬೇಕು ಹಾಗೂ ಆ್ಯಡ್–ಆನ್ ಕಾರ್ಡ್‌ನಲ್ಲಿ ಹೊಸದಾಗಿ ಸೇರ್ಪಡೆಗೊಂಡ ವ್ಯಕ್ತಿಯ ಮಾಹಿತಿಯನ್ನು ಮುಖಪುಟದಲ್ಲಿ ಬರೆದು ಹಿಂಬದಿಯಲ್ಲಿ ಫೋಟೋ ಅಂಟಿಸಬೇಕು ಮತ್ತು ಆ ಆ್ಯಡ್–ಆನ್ ಕಾರ್ಡನ್ನು ಡಾಟಾ ಎಂಟ್ರಿಗೆ ಸಲ್ಲಿಸತಕ್ಕದ್ದು.
- ಹಿಂದಿನ ವರ್ಷಗಳಲ್ಲಿ ನೊಂದಾಯಿಸಿದ್ದ ಎಲ್ಲಾ ಯಶಸ್ವಿನಿ ಸದಸ್ಯರಿಗೂ ಯೂನಿಕ್ ಐಡಿ ನೀಡಿ ಮಾಹಿತಿಯನ್ನು ಯಶಸ್ವಿನಿ ವೆಬ್‌ಸೈಟ್ www.yeshasvini.kar.nic.inನಲ್ಲಿ ಅಳವಡಿಸಲಾಗಿದೆ. ಯಾವುದೇ ಕಾರಣದಿಂದ ಹಿಂದಿನ ವರ್ಷಗಳಲ್ಲಿ ನೊಂದಾಯಿಸಿಕೊಂಡ ಸದಸ್ಯರು ನವೀಕರಿಸಿಕೊಂಡದಿದ್ದಲ್ಲಿ ಅಂತಹವರು ಈ ವರ್ಷ ಹೊಸದಾಗಿ ಕಾರ್ಡ್ ಪಡೆಯಬಹುದು.
- ಈ ಕೆಳಕಂಡಂತೆ ಸೌಲಭ್ಯಗಳನ್ನು ಯಶಸ್ವಿನಿ ಸದಸ್ಯರಿಗೆ ಒದಗಿಸಲಾಗುವುದು.

  **A. ವಾರ್ಡ್‌ಗಳ ಸೌಲಭ್ಯ :** ಜನರಲ್ ವಾರ್ಡ್‌ನ ಸೌಲಭ್ಯದಲ್ಲಿ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಅನುಮತಿಸಿದ 823 ಶಸ್ತ್ರ ಚಿಕಿತ್ಸೆಗಳನ್ನು ಒದಗಿಸಲಾಗುವುದು. ಯಶಸ್ವಿನಿ ಸದಸ್ಯರು ಸ್ಪೆಷಲ್ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯಲು ಇಚ್ಚಿಸಿದರೆ ಅಂತಹ ಸದಸ್ಯರು ಸ್ಪೆಷಲ್ ವಾರ್ಡ್‌ನಲ್ಲಿ ಚಿಕಿತ್ಸೆಗೆ ಯಶಸ್ವಿನಿ ಟ್ರಸ್ಟ್ ನಿಗಧಿಪಡಿಸುವ ವೆಚ್ಚವನ್ನು ಯಶಸ್ವಿನಿ ಸಹಕಾರ ರೈತರ ಆರೋಗ್ಯ ರಕ್ಷಣಾ ಯೋಜನೆಯಿಂದ ಆಸ್ಪತ್ರೆಗೆ ದೊರಕುವ ಚಿಕಿತ್ಸಾ ವೆಚ್ಚವನ್ನು ಕಳೆದು ಉಳಿದ ಮೊತ್ತವನ್ನು ಪಾವತಿಸಬೇಕು.

  **B. ರಿಯಾಯಿತಿ ದರದ ಹೊರರೋಗಿ ಚಿಕಿತ್ಸೆ :** 2016–17ನೇ ಸಾಲಿನಲ್ಲಿಯೂ ಸಹ ರಿಯಾಯಿತಿ ದರದಲ್ಲಿ ಅಂದರೆ ರೂ. 100/– ಸಾಮಾನ್ಯ ಹೊರರೋಗಿ ತಪಾಸಣೆಗೆ ಯಶಸ್ವಿನಿ ಸದಸ್ಯರು ಪಾವತಿಸಬೇಕು. ವಿಶೇಷ ಹೊರರೋಗಿ ತಪಾಸಣೆಗೆ ರೂ. 200/– ಪಾವತಿಸಬೇಕು ಮತ್ತು ಅವರು ತಪಾಸಣೆಗಾಗಿ ಪಾವತಿಸಿದ ರಶೀತಿಯ ಮೇಲೆ 3 ತಿಂಗಳವರೆಗೆ ಮೇಲೆ ಹೇಳಿದ ಹೊರರೋಗಿ ಚಿಕಿತ್ಸೆಗಳನ್ನು ಉಚಿತವಾಗಿ ಪಡೆಯಬಹುದು.

  **ಅ. ಕ್ಲೀನಿಕಲ್ ಇನ್ವೆಸ್ಟಿಗೇಷನ್ :** 2016–17ನೇ ಸಾಲಿನಲ್ಲಿಯೂ ಯಶಸ್ವಿನಿ ಸದಸ್ಯರು ಶೇ 25 ರಿಯಾಯಿತಿ ದರದಲ್ಲಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಕ್ಲಿನಿಕಲ್ ಮತ್ತು ಇತರೆ ತಪಾಸಣೆಗಳನ್ನು (Clinical & other Investigation) ಪಡೆಯಬಹುದು.

  **ಆ. ಗರಿಷ್ಟ ಮೊತ್ತದ ಚಿಕಿತ್ಸೆ :** ಆಯಾ ವರ್ಷದಲ್ಲಿ ಒಂದು ಬಾರಿ ದಾಖಲಾದರೆ ರೂ. 1.25 ಲಕ್ಷಗಳು ಮತ್ತು ಅದೇ ವರ್ಷ ಅನೇಕ ಸಾರಿ ಆಸ್ಪತ್ರೆಗೆ ದಾಖಲಾದರೆ ರೂ. 2.00 ಲಕ್ಷಗಳು
- 2016–17ನೇ ಸಾಲಿನಲ್ಲಿ ಕೆಲವು ಸದಸ್ಯರು ಯಶಸ್ವಿನಿ ವಂತಿಗೆ ಹಣವನ್ನು ಸಹಕಾರ ಸಂಘಕ್ಕೆ ಪಾವತಿ ಮಾಡಿ, ಫೋಟೋ ಇತ್ಯಾದಿ ಅವಶ್ಯಕ ದಾಖಲೆಗಳನ್ನು ಒದಗಿಸದೆ ಇದ್ದರೆ, ಈ ಕಾರಣದಿಂದ ಸಹಕಾರ ಸಂಘದಲ್ಲಿ ಬಾಕಿ ಉಳಿದ ವಂತಿಗೆಯ ಮೊತ್ತವನ್ನು ಸಹಕಾರ ಸಂಘವು ಯಶಸ್ವಿನಿ ಟ್ರಸ್ಟ್‌ಗೆ ನೀಡಿದ ದೇಣಿಗೆಯೆಂದು ಪರಿಗಣಿಸಿ, ಟ್ರಸ್ಟ್‌ನ ಖಾತೆಗೆ ಜಮಾಮಾಡತಕ್ಕದ್ದು.
- 2016–17ನೇ ಸಾಲಿನ ಯಶಸ್ವಿನಿ ಯೋಜನೆಯ ಅವಧಿಯು ದಿನಾಂಕ : 01–06–2016 ರಿಂದ ಪ್ರಾರಂಭವಾಗಿ **31–05–2017ಕ್ಕೆ ಮುಗಿಯುತ್ತದೆ.**

**ಆದೇಶದ ಪೂರ್ಣ ವಿವರಗಳು ಸಹಕಾರಿಯ www.souharda.coop ವೆಬ್‌ಸೈಟ್‌ನಲ್ಲಿ ಲಭ್ಯವಿದೆ.**

# ಜಾಗತಿಕ ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರ ವಹಿಸಿವೆ



▶▶ ಶ್ರೀ ಸತೀಶ ಮರಾಠೆ, ಸಹಕಾರ ಭಾರತಿ

ಸಹಕಾರ ಸಂಸ್ಥೆಗಳು ಆರ್ಥಿಕ ಸಂಘಟನೆಗಳಾಗಿ, ಸ್ವಯಂ ಸೇವಾ ಸಂಸ್ಥೆಗಳಾಗಿ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಹರಿಕಾರರಾಗಿ ಕಾರ್ಯನಿರ್ವಹಿಸುತ್ತಾ ಬಂದಿವೆ. ಪ್ರಜಾಪ್ರಭುತ್ವದ ತಳಹದಿ, ಮಾನವೀಯ ಮೌಲ್ಯಗಳನ್ನೊಳಗೊಂಡ ಸಹಕಾರ ತತ್ವಗಳ ಅನುಷ್ಠಾನದಿಂದಾಗಿ ಸಹಕಾರ ಕ್ಷೇತ್ರ ಸ್ಥಳೀಯ ಅವಶ್ಯಕತೆಗಳನ್ನು ಪೂರೈಸುವ ಆರ್ಥಿಕ ಸಂಘಟನೆಯಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ವಿಶ್ವದ ಅರ್ಥ ವ್ಯವಸ್ಥೆಗಳಲ್ಲಿ ಮಹತ್ವದ ವ್ಯವಸ್ಥೆಯಾಗಿ ಗುರುತಿಸಲಾಗಿದೆ.

ವಿಶ್ವ ಸಂಸ್ಥೆಯಲ್ಲಿ ಸಹಕಾರ ಸಂಸ್ಥೆಗಳು ಉತ್ತಮ ರಾಷ್ಟ್ರ ನಿರ್ಮಾಣ ಬಲ್ಲವು ಎಂಬ ವಿಶ್ವಾಸವನ್ನು ಗಳಿಸಿದೆಯಲ್ಲದೇ ಕಷ್ಟ ಕಾಲದಲ್ಲೂ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲವು ಎಂಬುದನ್ನು ದೃಢೀಕರಿಸಿರುವುದು ಸಹಕಾರಿ ಗಳು ಹೆಮ್ಮೆಪಡುವ ವಿಷಯ.

### ಸಹಕಾರ ಕ್ಷೇತ್ರದ ವಿಶ್ವ ಸ್ವರೂಪ :

ವಿಶ್ವದ 100 ದೇಶಗಳಲ್ಲಿ 1 ಬಿಲಿಯನ್ ಅಂದರೆ 100 ಕೋಟಿ ಸದಸ್ಯರನ್ನು ಹೊಂದಿದೆ. ಫಿನ್‌ಲ್ಯಾಂಡ್ ಮತ್ತು ಸಿಂಗಪುರಗಳಲ್ಲಿ ಪ್ರತಿ 2 ಜನರಲ್ಲಿ ಒಬ್ಬರು, ಕೆನಡ, ನ್ಯೂಜಿಲೆಂಡ್ ಮತ್ತು ಫಿನ್‌ಲ್ಯಾಂಡ್ ದೇಶಗಳಲ್ಲಿ ಪ್ರತಿ 3 ಜನರಲ್ಲಿ ಒಬ್ಬರು, ಯು.ಎಸ್.ಎ., ಮಲೇಷಿಯಾ ಹಾಗೂ ಜರ್ಮನಿಗಳಲ್ಲಿ ಪ್ರತಿ 4 ಜನರಲ್ಲಿ ಒಬ್ಬರು, ಜಪಾನಿನಲ್ಲಿ 3 ಜನರಿಗೆ ಒಬ್ಬರು ಹೀಗೆ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಹೀಗಾಗಿ, ಸಹಕಾರ ಕ್ಷೇತ್ರದ ವ್ಯಾಪ್ತಿ ಗಣನೀಯವಾಗಿದೆ ಮತ್ತು ಈ ಕ್ಷೇತ್ರ ಮಹತ್ವವನ್ನು ಪಡೆದಿದೆ.

ವಿಶ್ವದಾದ್ಯಂತ 100 ಮಿಲಿಯನ್ ಜನರಿಗೆ ಉದ್ಯೋಗ ನೀಡಿರುವ ಈ ಸಹಕಾರ ಕ್ಷೇತ್ರ ದೇಶದ ಜಿಡಿಪಿಯಲ್ಲಿ (GROSS DOMESTIC PRODUCT) ದೇಶದ ಒಟ್ಟು ಉತ್ಪಾದನೆಯಲ್ಲಿ 45%, ನ್ಯೂಜಿಲೆಂಡ್ 22%, ನಾರ್ವೆ ಹಾಲು ಉತ್ಪಾದನೆಯಲ್ಲಿ 80%, ಕೋರಿಯಾ ಮೀನು ಉತ್ಪಾದನೆಯಲ್ಲಿ 71%, ಕೃಷಿ ಉತ್ಪಾದನೆಯಲ್ಲಿ 40%, ಕೊಲಂಬಿಯದಲ್ಲಿ 24% ಆರೋಗ್ಯ ಸೇವೆಯಲ್ಲಿ 25% ಉಳಿತಾಯ, ಸಿಂಗಪೂರದಲ್ಲಿ 55% ಚಿಲ್ಲರೆ ಮಾರಾಟ ವ್ಯವಹಾರ, ಡೆನ್‌ಮಾರ್ಕ್‌ನಲ್ಲಿ 36% ವ್ಯವಹಾರ, ಹಂಗೇರಿಯಲ್ಲಿ 14% ವ್ಯವಹಾರಗಳು ಸಹಕಾರ ಕ್ಷೇತ್ರದ ಮೂಲಕ ನಡೆಯುತ್ತದೆ.

ಮುಂದುವರೆದ ರಾಷ್ಟ್ರಗಳಲ್ಲಿ ವಿಶ್ವದಲ್ಲಿ ಕೆಲವು ದೇಶಗಳಲ್ಲಿ ಆರ್ಥಿಕ ಅಸ್ಥಿರ ವ್ಯವಸ್ಥೆಗಳು, ಅಭದ್ರ ಆಹಾರ ವ್ಯವಸ್ಥೆ, ಹೆಚ್ಚುತ್ತಿರುವ ಅಸಮಾನತೆ, ಹವಮಾನ ವೈಪರಿತ್ಯ, ಪರಿಸರ ಬದಲಾವಣೆಗಳಿಂದ ಜನರ ಜೀವನದ ಮೇಲೆ ಅನೇಕ ತೊಂದರೆಗಳು ಆಗುತ್ತವೆ. ಈ ಎಲ್ಲ ತೊಂದರೆಗಳ ನಿವಾರಣೆಯಲ್ಲಿ ಸಹಕಾರ ಕ್ಷೇತ್ರ ಪರಿಹಾರ ಒದಗಿಸಬಲ್ಲವು ಎಂದು ಆಶಿಸಬಹುದಾಗಿದೆ.

ಪ್ರಸಕ್ತ ವಿಶ್ವ ಅರ್ಥವ್ಯವಸ್ಥೆಯಲ್ಲಿ ಖಾಸಗಿ ಹಣಕಾಸು ಸಂಸ್ಥೆಗಳ ಪ್ರಭಾವದಿಂದಾಗಿ ಸದಸ್ಯ ಕೇಂದ್ರೀಕೃತ ಸಹಕಾರ ಸಂಸ್ಥೆಗಳ ಅಭಿವೃದ್ಧಿ ನಿರೀಕ್ಷಿಸಿದ ಮಟ್ಟದಲ್ಲಿದಿದ್ದರೂ ಸಹಕಾರ ಸಂಸ್ಥೆಗಳು ಹಾಗೂ ಕ್ರೆಡಿಟ್ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಿ, ಅಂತರರಾಷ್ಟ್ರೀಯ ಮಾನ್ಯತೆ ಪಡೆದಿರುವುದು ಸ್ವಾಗತಾರ್ಹ. 2008ರ ಹಣಕಾಸಿನ ಮುಗ್ಗಟ್ಟಿನ ಸಂದರ್ಭದಲ್ಲಿ 52000 ಕ್ರೆಡಿಟ್ ಸಹಕಾರ ಸಂಸ್ಥೆಗಳು 177 ಮಿಲಿಯನ್ ಸದಸ್ಯರಿಗೆ 100 ದೇಶಗಳಲ್ಲಿ ಸೇವೆ ನೀಡಿ, ಸಹಕಾರ ಕ್ಷೇತ್ರದ ಅಗತ್ಯತೆಯನ್ನು ವಿಶ್ವಕ್ಕೆ ಸಾರಿವೆ. ವಿಶ್ವದ ಅತಿ ದೊಡ್ಡ ಕೃಷಿ ಬ್ಯಾಂಕ್ "ರೊಬೊ" ಕೂಡ ಸಹಕಾರ ಕ್ಷೇತ್ರದಲ್ಲಿ ಬ್ಯಾಂಕಿಂಗ್ ಅಭಿವೃದ್ಧಿಯೊಂದಿಗೆ ಸಹಕಾರಿ ಕ್ಷೇತ್ರದ ಬಲದಿಂದ ಇನ್ನಷ್ಟು ಎತ್ತರಕ್ಕೆ ಬೆಳೆಯುತ್ತಿರುವುದು ಶ್ಲಾಘನೀಯ. ಸಹಕಾರ ಕ್ಷೇತ್ರದ ಅಸ್ತಿತ್ವದಿಂದ ಗ್ರಾಮೀಣ ಪ್ರದೇಶಗಳಲ್ಲಿ ಸದಸ್ಯರಲ್ಲಿ ಉಳಿತಾಯ ಮನೋಭಾವ ಬೆಳೆಸಲು ಸಾಧ್ಯವಾಗಿದೆ ಮತ್ತು ಹಣಕಾಸಿನ ಅಗತ್ಯತೆಗಳನ್ನು ಪೂರೈಸಲು ಸಾಧ್ಯವಾಗಿದೆ.

ವಿಶ್ವದ ಮುಂದುವರೆದ ರಾಷ್ಟ್ರಗಳಲ್ಲಿ ವಿಶೇಷವಾಗಿ ಯು.ಎಸ್.ಎ.ನಲ್ಲಿ ಸಹಕಾರಿ ಸಂಸ್ಥೆಗಳು ಆರೋಗ್ಯ ವ್ಯವಸ್ಥೆಯನ್ನು ಗ್ರಾಹಕ ಸಹಕಾರ ಸಂಸ್ಥೆಗಳು ನಿರ್ವಹಿಸುತ್ತಿವೆ. ಫೆಸಿಫಿಕ್ ನಾರ್ತಾವೆಸ್ಟ್ ಒಂದೇ ಗ್ರಾಹಕ ಸಹಕಾರ ಸಂಘ ದೇಶದ 570000 ಜನರ ಆರೋಗ್ಯ ವ್ಯವಸ್ಥೆಯನ್ನು ನಿರ್ವಹಿಸುತ್ತಿದೆ. ಮಿಡ್‌ವೇಸ್ಟ್‌ನಲ್ಲಿ ಒಂದು ಗ್ರಾಹಕರ ಸಹಕಾರ ಸಂಘ 630000 ಜನರ ಆರೋಗ್ಯವನ್ನು ನಿರ್ವಹಿಸುತ್ತದೆ. ಜಪಾನ್‌ನಲ್ಲಿ 120 ಗ್ರಾಹಕರ ಸಹಕಾರ ಸಂಸ್ಥೆಗಳು 3 ಮಿಲಿಯನ್ ಜನರಿಗೆ ಆರೋಗ್ಯ ವ್ಯವಸ್ಥೆಯನ್ನು ನಿರ್ವಹಿಸುತ್ತಿವೆ. ಅದೇ ಮಾದರಿಯಲ್ಲಿ ಗ್ರಾಹಕರ ಸಹಕಾರಿ ವ್ಯವಸ್ಥೆಯಲ್ಲಿ ಬ್ರಿಟನ್, ಸಿಂಗಪೂರ ಮತ್ತು ಜಪಾನ್‌ಗಳಲ್ಲಿ ಅನೇಕ ಸೇವೆಗಳನ್ನು ನೀಡುವ ವ್ಯವಸ್ಥೆ ಜಾರಿಯಲ್ಲಿದೆ.

ಇದೇ ಮಾದರಿಯಲ್ಲಿ ಸ್ವೀಡನ್, ನಾರ್ವೆ, ಯುಎಸ್‌ಎ ಗಳಲ್ಲಿ ಗೃಹ ನಿರ್ಮಾಣ ಸಂಸ್ಥೆಗಳ ಮೂಲಕ ಲಕ್ಷಾಂತರ ಜನರಿಗೆ ವಸತಿ ವ್ಯವಸ್ಥೆಗಳನ್ನು ಒದಗಿಸಿವೆ. ಮಾರುಕಟ್ಟೆಯ ಪೈಪೋಟಿಯನ್ನು ಎದುರಿಸಲು ಸಾಧ್ಯವಾಗದೆ ಮತ್ತು ಕೃಷಿ ಉತ್ಪನ್ನಗಳಿಗೆ ಸಹಾಯ ಧನವು ಕಡಿತವಾಗಿರುವ ಹಿನ್ನಲೆಯಲ್ಲಿ ಸಣ್ಣ ರೈತರ ಸಂಕಷ್ಟಗಳ ನಿವಾರಿಸಲು ವಿಶ್ವದ 65 ಸಹಕಾರಿ ಸಂಸ್ಥೆಗಳು 400 ಮಾರ್ಕೆಟ್‌ಗಳ ವ್ಯವಸ್ಥೆಯನ್ನು ಮಾಡಿದೆ. 12000 ಕೃಷಿ ಉತ್ಪಾದಕರು ನೇರವಾಗಿ ಗ್ರಾಹಕರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯವಸ್ಥೆ ಸಹಕಾರಿ ಕ್ಷೇತ್ರದಿಂದ ಆಗಿರುವುದು ಗಮನಾರ್ಹ.

### ಸಹಕಾರ ಕ್ಷೇತ್ರದ ಸವಾಲುಗಳು

ಬದಲಾಗಿರುವ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರ ಅನೇಕ ಸವಾಲುಗಳನ್ನು ಎದುರಿಸಿ ಕಾರ್ಯನಿರ್ವಹಿಸಬೇಕಾಗುದುದು ಅನಿವಾರ್ಯ. ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಅತ್ಯಂತ ಮಹತ್ವದ ಸವಾಲು ಎಂದರೆ ಸರಕಾರಗಳ ಹಾಗೂ ಸಾರ್ವಜನಿಕರ ತಮ್ಮ ಅರ್ಥ ವ್ಯವಸ್ಥೆಯ ಆರ್ಥಿಕ ಸ್ಥಿತಿಗತಿಗಳ ಅಧ್ಯಯನದ ಕೊರತೆ, ಹಾಗೆಯೇ, ಸಹಕಾರಿ ಸಂಸ್ಥೆಗಳನ್ನು ಖಾಸಗಿ ಸಂಸ್ಥೆಗಳೊಡನೆ

ಹೋಲಿಸುವುದು, ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕ ಕಾನೂನುಗಳು ಸೃಷ್ಟಿಯಾಗದಿರುವುದು, ಸಹಕಾರ ಕ್ಷೇತ್ರದ ಸಾಧನೆಗಳಿಗೆ ವೇದಿಕೆಗಳಲ್ಲಿ ಸಿಗುವ ಪುರಸ್ಕಾರ ಸಹಕಾರಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ದೊರಕದಿರುವುದು, ಜನರಲ್ಲಿ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಪೂರ್ಣ ತಿಳುವಳಿಕೆ ನೀಡುವ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದಿರುವುದು, ಸಹಕಾರ ಕ್ಷೇತ್ರದಲ್ಲಿ ವೃತ್ತಿಪರತೆಯನ್ನು ಬೆಳೆಸಿಕೊಳ್ಳದಿರುವುದು, ಸಹಕಾರಿಗಳಲ್ಲಿ ಸದಸ್ಯರು ಸಕ್ರಿಯವಾಗಿ ಭಾಗವಹಿಸುವಂತೆ ಮಾಡದಿರುವುದು, ಸಂಪನ್ಮೂಲಗಳ ಕ್ರೋಢೀಕರಣ ಹಾಗೂ ವಿನಿಯೋಗವನ್ನು ವೈಜ್ಞಾನಿಕ ರೀತಿಯಲ್ಲಿ ನಿರ್ವಹಿಸುವಂತೆ ಮಾಡುವುದು, ಸಹಕಾರಿಯಲ್ಲಿ ಸಾಂಪ್ರದಾಯಿಕ ಕಾರ್ಯಚಟುವಟಿಕೆಗಳ ಜೊತೆಗೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸುವಂತೆ ಮಾಡುವುದು ಮತ್ತು ವ್ಯಾಪಾರ ವ್ಯವಹಾರಗಳಲ್ಲಿ ವಿಭಿನ್ನತೆಯನ್ನು ಅಳವಡಿಸುವುದು, ಸಹಕಾರಿ ಸಂಸ್ಥೆಗಳನ್ನು ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು, ಪ್ರಗತಿಪರ ವಿಷಯಗಳ ಅನುಷ್ಠಾನಕ್ಕಾಗಿಕಾರ್ಯಕ್ರಮಗಳನ್ನು ಜಾರಿಮಾಡದಿರುವುದು ಇತ್ಯಾದಿ.

ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆ, ವ್ಯವಹಾರಿಕ ಸ್ವಾತಂತ್ರ್ಯ, ಸ್ವಯಂ ನಿಯಂತ್ರಣ ವ್ಯವಸ್ಥೆಯ ಬಗ್ಗೆ ತಿಳುವಳಿಕೆ ಹಾಗೂ ಆಡಳಿತದ ಪರಿಜ್ಞಾನವನ್ನು ಒದಗಿಸುವ ಸಮರ್ಪಕ ವ್ಯವಸ್ಥೆ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಪೂರಕ. ಸಹಕಾರಿ ಸಂಸ್ಥೆಗಳು ಸರಕಾರಗಳ ಯೋಜನೆಗಳನ್ನು ಜಾರಿಪಡಿಸುವ ಸಾಧನವಾಗಿಕಾರ್ಯನಿರ್ವಹಿಸದೇ ಸರ್ವತೋಮುಖ ಅಭಿವೃದ್ಧಿಯ ಸಾಧನವಾಗಿ ಕಾರ್ಯ ನಿರ್ವಹಿಸಬೇಕು. ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವ ಕಾರ್ಯ ಸರಕಾರಗಳಿಂದ, ಸಹಕಾರಿಗಳಿಂದ ಹಾಗೂ ಸಾಮಾನ್ಯ ಸದಸ್ಯರಿಂದಲೂ ಆಗಬೇಕು ಎಂಬುವುದರಲ್ಲಿ ಎರಡು ಮಾತಿಲ್ಲ. ಈ ನಿಟ್ಟಿನಲ್ಲಿ ಸಹಕಾರಿಗಳು ಕಾರ್ಯಾನಿರ್ವಹಿಸುವುದು ಅಗತ್ಯ.

## “ಇ-ಸ್ಟ್ಯಾಂಪಿಂಗ್” ವ್ಯವಹಾರ ನಡೆಸುತ್ತಿರುವ ಸೌಹಾರ್ದ ಸಹಕಾರಿಗಳು ಗಮನಿಸಬೇಕಾದ ಪ್ರಮುಖ ಅಂಶಗಳು

- ಇ-ಸ್ಟ್ಯಾಂಪ್ ವ್ಯವಹಾರವನ್ನು ನಡೆಸುತ್ತಿರುವ ಸಹಕಾರಿಗಳು ಇ-ಸ್ಟ್ಯಾಂಪಿಂಗ್ ವ್ಯವಹಾರದ ಮೊತ್ತವನ್ನು ಸಂಯುಕ್ತ ಸಹಕಾರಿಯ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕಾದರೆ ತಮ್ಮ ಸಹಕಾರಿಯ ಬ್ಯಾಂಕ್ ಖಾತೆಯಿಂದಲೇ ಎನ್‌ಇಎಫ್‌ಟಿ/ ಆರ್‌ಟಿಜಿಎಸ್ ಮುಖಾಂತರ ವರ್ಗಾವಣೆ ಮಾಡಬೇಕು.
- ಯಾವುದೇ ವ್ಯಕ್ತಿ ಅಥವಾ ಬೇರೆ ಸಂಸ್ಥೆಯ ಹೆಸರಿನ ಖಾತೆಯಿಂದ ಹಣ ವರ್ಗಾವಣೆ ಮಾಡಬಾರದು.
- ನಗದು ರೂಪದಲ್ಲಿ ಜಮಾ ಮಾಡಿದ ಪಕ್ಷದಲ್ಲಿ ಆ ಹಣವನ್ನು ಸದರಿ ಸಹಕಾರಿ ಖಾತೆಗೆ ವರ್ಗಾವಣೆ ಮಾಡುವುದಿಲ್ಲ.
- ಮೊತ್ತವನ್ನು ಸಂಯುಕ್ತ ಸಹಕಾರಿಗೆ ಜಮಾ ಮಾಡಿದ ಸಂದರ್ಭದಲ್ಲಿ ತಮ್ಮ ಸಹಕಾರಿಯ ಹೆಸರು ಮತ್ತು ವಿಳಾಸ (ಶಾಖೆಯನ್ನು ಹೊಂದಿದ್ದರೆ ಪೂರ್ಣ ವಿಳಾಸ), ಹಣ ಸಂದಾಯದ ಪೂರ್ಣ ಮಾಹಿತಿಯನ್ನು (ಬ್ಯಾಂಕ್ ಹೆಸರು ಮತ್ತು ಶಾಖೆ, ದಿನಾಂಕ, ಮೊತ್ತ ಮತ್ತು ಎನ್‌ಇಎಫ್‌ಟಿ/ ಆರ್‌ಟಿಜಿಎಸ್ ವ್ಯವಹಾರದ ಸಂಖ್ಯೆ) ಕಡ್ಡಾಯವಾಗಿ ನಮೂದಿಸಬೇಕು.

## ಬರಪೀಡಿತ ಪರಿಹಾರ ಕಾರ್ಯಗಳಿಗಾಗಿ ಸಹಾಯ ನೀಡುವ ಕುರಿತು **ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಒಂದು ಮನವಿ**

ಸಹಕಾರಿ ಬಂಧುಗಳೇ, ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಅನಾವೃಷ್ಟಿಯಿಂದಾಗಿ ಹಾಗೂ ಬೇಸಿಗೆಯ ಬಿಸಿಲಿಂದಾಗಿ ಬರಗಾಲ ಸಂಭವಿಸಿದ್ದು, ಸಾವಿರಾರು ಜನರಿಗೆ ಕುಡಿಯಲು ನೀರು ಇಲ್ಲದೇ ಜನರು ಪರಿತಪಿಸುವಂತಾಗಿದೆ. ಅನೇಕರು ಮಳೆಯನ್ನೇ ಅವಲಂಬಿಸಿ ಜೀವನ ನಡೆಸುವಂತಹರಾಗಿದ್ದು, ಬೇರೆ ರಾಜ್ಯಗಳಿಗೆ, ಜಿಲ್ಲೆಗಳಿಗೆ ವಲಸೆ ಹೋಗುತ್ತಿದ್ದಾರೆ. ಇದು ತಮಗೆಲ್ಲ ತಿಳಿದ ವಿಷಯವಾಗಿದೆ. ಸರಕಾರ ಹಾಗೂ ಸಂಘ ಸಂಸ್ಥೆಗಳು ನೆರವು ನೀಡುವಲ್ಲಿ ಮುಂದಾಗಿವೆ. ಸೌಹಾರ್ದ ಸಹಕಾರಿಗಳು ಸಹ ಈ ಸಂದರ್ಭದಲ್ಲಿ ನೆರವು ನೀಡಲು ಮುಂದಾಗುವುದು ಅವಶ್ಯವಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳು ಈ ಹಿಂದೆ ಉತ್ತರ ಕರ್ನಾಟಕ ಹಾಗೂ ಜಮ್ಮು ಕಾಶ್ಮೀರಗಳಲ್ಲಿ ಮತ್ತು ತಮಿಳುನಾಡು ರಾಜ್ಯಗಳಲ್ಲಿ ನೆರೆ ಹಾವಳಿಯಾದಾಗ ನೆರೆ ಸಂತ್ರಸ್ತರಿಗೆ ತಾವುಗಳೆಲ್ಲ ಉದಾರವಾಗಿ ನೆರವು ನೀಡಿರುವುದಕ್ಕೆ ಸಂಯುಕ್ತ ಸಹಕಾರಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಅದರಂತೆ ಈ ಬಾರಿ ಬರಪೀಡಿತರಿಗೆ ಸಾಂತ್ವನವನ್ನು ಹೇಳುವುದರ ಜೊತೆಗೆ ಅವರಿಗೆ ನೆರವನ್ನು ನೀಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಅಪೇಕ್ಷಿಸುತ್ತದೆ.

ಜಿಲ್ಲೆಗಳ ಸೌಹಾರ್ದ ಸಹಕಾರಿಗಳು ಆಯಾ ಜಿಲ್ಲೆಯ ಸಂಯುಕ್ತ ಸಹಕಾರಿಯ ನಿರ್ದೇಶಕರ ನೇತೃತ್ವದಲ್ಲಿ ತತ್‌ಕ್ಷಣವೇ ಒಂದು ಸಭೆ ಮಾಡಿ, ಬರಪೀಡಿತರ ಕಲ್ಯಾಣ ಸಮಿತಿಯನ್ನು ರಚಿಸಿಕೊಂಡು ನೀರಿನ ಅಭಾವವಿರುವ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದು ಮತ್ತು ಬೋರ್‌ವೆಲ್ ಹಾಕಿಸುವುದು, ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಗಳಲ್ಲಿ ರಿಪೇರಿ ಮಾಡಿಸುವುದು ಹಾಗೂ ಸ್ಥಳೀಯವಾಗಿ ನಿಮಗೆ ಸರಿಯೆನಿಸುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಂಯುಕ್ತ ಸಹಕಾರಿಯು ಆಡಳಿತ ಮಂಡಲಿಯ ವಿನಂತಿಸುತ್ತದೆ.

**ಈ ವಿಪತ್ತಿನ ಪರಿಹಾರ ಕಾರ್ಯದಲ್ಲಿ ಭಾಗಿಗಳಾಗೋಣ, ಮಾನವೀಯತೆಯನ್ನು ಮೆರೆಯೋಣ.**

**ಗುರುನಾಥ ಜಾಂತಿಕರ**
ಅಧ್ಯಕ್ಷರು

**ಹೆಚ್.ವಿ. ರಾಜೀವ್**
ಉಪಾಧ್ಯಕ್ಷರು

# ಸಹಕಾರಿ ನಾಯಕತ್ವ ಸವಾಲುಗಳು, ಅವಕಾಶಗಳು, ಉತ್ತರದಾಯಿತ್ವ ಮತ್ತು ಗುಣಮಟ್ಟ ನಿರ್ವಹಣೆ



▸▸ ಶ್ರೀ ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ.

## ನಮ್ಮ ಧ್ಯೇಯ

- ಸದಸ್ಯರಿಗೆ ಉತ್ತಮ ಗುಣಮಟ್ಟದ ಸೇವೆ
- ಆಡಳಿತದಲ್ಲಿ ಪಾರದರ್ಶಕತೆ
- ವೃತ್ತಿಪರ ಆಡಳಿತ
- ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಣೆ ನಿರ್ದೇಶಕ ಎಂದರೆ...

ಲೀಡರ್... ಪಾಲಿಸಿ ಮೇಕರ್... ಧರ್ಮದರ್ಶಿ ಐ.ಪಿ.ಸಿ. ಕಲಂ 21ರ ರೀತ್ಯಾ ಸಾರ್ವಜನಿಕ ನೌಕರ ಈ ಹಿನ್ನೆಲೆಯಲ್ಲಿ... ನಿರ್ದೇಶಕರ ಸ್ಥಾನ ಬಹಳ ಮಹತ್ವವನ್ನು ಪಡೆಯುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಕಲಂ 27ರಂತೆ ಸಹಕಾರಿಯ ಕೆಲಸ ಕಾರ್ಯಗಳ ನಿಯಂತ್ರಣ ಮತ್ತು ಮಾರ್ಗದರ್ಶನದಂತಹ ಕೆಲಸವನ್ನು ಆಯಾ ಸಹಕಾರಿಯ ನಿರ್ದೇಶಕರ ಮಂಡಲಿಗೆ ವಹಿಸಿಕೊಡಲಾಗಿದೆ.

## ಮಂಡಲಿ ಅಧಿಕಾರಗಳು ಮತ್ತು ಪ್ರಕಾರ್ಯಗಳು

- ಸದಸ್ಯರುಗಳನ್ನು ಸೇರಿಸಿಕೊಳ್ಳಲು ಮತ್ತು ತೆಗೆದುಹಾಕಲು;
- ಪದಾಧಿಕಾರಿಗಳನ್ನು ಚುನಾಯಿಸಲು ಮತ್ತು ತೆಗೆದುಹಾಕಲು;
- ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕ ಮಾಡಲು ಮತ್ತು ತೆಗೆದುಹಾಕಲು;
- ಸಿಬ್ಬಂದಿ ಸಂಖ್ಯೆಯನ್ನು ನಿಗದಿಪಡಿಸಲು;
- ಸಂಸ್ಥೆಯ ಹಾಗೂ ಸದಸ್ಯರುಗಳ ಸೇವೆಗಳಿಗೆ ಸಂಬಂಧಪಟ್ಟಂತೆ ಕಾರ್ಯನೀತಿಗಳನ್ನು ರೂಪಿಸಲು ಅಧಿಕಾರ ಹೊಂದಿರುತ್ತಾರೆ.
- ನಿಧಿಗಳ ಸಂಗ್ರಹಣೆ, ಬಳಕೆ, ಅಭಿರಕ್ಷೆ ಮತ್ತು ಹೂಡಿಕೆ ಹಾಗೂ ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ಜವಾಬ್ದಾರರಾಗಿರುತ್ತಾರೆ.
- ಸಾಮಾನ್ಯ ನಿಕಾಯದ ಅನುಮೋದನೆಗಾಗಿ ವಾರ್ಷಿಕ ವರದಿ, ವಾರ್ಷಿಕ ಯೋಜನೆ ಮತ್ತು ಬಜೆಟ್ಟನ್ನು ಮಂಡಿಸಲು, ಲೆಕ್ಕಪರಿಶೋಧನೆ ಮತ್ತು ಪಾಲನಾ ವರದಿಗಳನ್ನು ಪರಿಶೀಲಿಸಲು ಮತ್ತು ಸಾಮಾನ್ಯ ನಿಕಾಯದ ಮುಂದೆ ಮಂಡಿಸಲು ಜವಾಬ್ದಾರರಾಗಿರುತ್ತಾರೆ.
- ವಿಚಾರಣಾ ವರದಿ ಇದ್ದಲ್ಲಿ, ಪರಿಶೀಲಿಸಿ ಅಕ್ರಮಗಳು ಯಾವುದಾದರೂ ಇದ್ದಲ್ಲಿ, ಸರಿಪಡಿಸಲು ಕೈಗೊಂಡ ಕ್ರಮಗಳ ಪಾಲನಾ ವರದಿಯನ್ನು ಪರಿಶೀಲಿಸಲು ಮತ್ತು ಸಾಮಾನ್ಯ ನಿಕಾಯದ ಮುಂದೆ ಮಂಡಿಸಲು, ಜವಾಬ್ದಾರರಾಗಿರುತ್ತಾರೆ.
- ಪ್ರತಿವರ್ಷ ಸೆಪ್ಟೆಂಬರ್ ತಿಂಗಳ 1 ರೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕ ಪತ್ರಗಳನ್ನು ಪರಿಶೋಧಿಸಿಕೊಡುವಂತೆ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಪಡೆಯಲು;
- ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ 25ರೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು;
- ಪ್ರತಿ ವರ್ಷ ಸೆಪ್ಟಂಬರ್ 30ರೊಳಗೆ ರಿಜಿಸ್ಟ್ರಾರರಿಗೆ ಹಾಗೂ ಸಂಯುಕ್ತ ಸಹಕಾರಿಗೆ ಮಾಹಿತಿಯನ್ನು ಸಲ್ಲಿಸಲು ಜವಾಬ್ದಾರರಾಗಿರುತ್ತಾರೆ.

ಈ ಜವಾಬ್ದಾರಿಗಳನ್ನು...ಪರಿಣಾಕಾರಿಯಾಗಿ ನಿರ್ವಹಿಸಬೇಕಾದರೆ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಾಗುತ್ತದೆ.

- ನಿಮ್ಮ ಸಹಕಾರಿಯ ನೋಂದಣಿ ಸರ್ಟಿಫಿಕೇಟನ್ನು ನೋಡಿದ್ದೀರಾ...?
- ನಿಮ್ಮ ಸಹಕಾರಿಯ ಬೈಲಾವನ್ನು ಓದಿದ್ದೀರಾ ...?
- ನಿಮ್ಮ ಸಹಕಾರಿಯ ಉದ್ದೇಶಗಳನ್ನು ಅರ್ಥಮಾಡಿಕೊಂಡಿದ್ದೀರಾ...?
- ನಿಮ್ಮ ಸಹಕಾರಿಯ ಸಾಲದ ನಿಯಮಗಳು, ಠೇವಣಿ ನಿಯಮಗಳು ಮತ್ತು ಸೇವಾ ನಿಯಮಗಳನ್ನು ತಿಳಿದುಕೊಂಡಿದ್ದೀರಾ?
- ಅಧ್ಯಕ್ಷರು ಯಾವ ದಾಖಲೆಗಳಿಗೆ ಸಹಿ ಮಾಡಬೇಕು ಎಂಬುದು ಗೊತ್ತಿದೆಯೇ?
- ಸಹಕಾರಿಯ ಆಡಳಿತ ಮಂಡಲಿ ಸಭೆಗಳು ನಿಯಮಿತವಾಗಿ ನಡೆಯುತ್ತಿವೆಯೆ...?
- ಆಡಳಿತ ಮಂಡಲಿ ಸಭೆಗಳಲ್ಲಿ ಎಲ್ಲ ನಿರ್ದೇಶಕರು ತಪ್ಪದೇ ಭಾಗವಹಿಸುತ್ತಿದ್ದೀರಾ..?
- ಜಮಾ – ಖರ್ಚು ತಃಖ್ತೆಗಳು ಸಹಕಾರಿಯ ಫಂಡ್ಸ್ ಮ್ಯಾನೇಜ್‌ಮೆಂಟ್ ಬಗ್ಗೆ ತಿಳಿಸುತ್ತವೆ ಎಂಬುದು ಗೊತ್ತಿದೆಯೇ...?
- ಆಡಿಟ್ ವರದಿ, ಹಣಕಾಸು ತಃಖ್ತೆಗಳು... ಸಹಕಾರಿಯ ವ್ಯವಹಾರಗಳ ಸಮಗ್ರ ಚಿತ್ರಣವನ್ನು ನೀಡುತ್ತವೆ ಎಂಬುದನ್ನು ಅರ್ಥಮಾಡಿಕೊಂಡಿದ್ದೀರಾ...?
- ಏಪ್ರಿಲ್ 30, ಸೆಪ್ಟೆಂಬರ್ 1, ಸೆಪ್ಟೆಂಬರ್ 25, ಸೆಪ್ಟೆಂಬರ್ 30 ಈ

ದಿನಗಳ ವಿಶೇಷತೆ ಏನು ಎಂಬುದು ತಮಗೆ ತಿಳಿದಿದೆಯೇ...?

- ನಿಮ್ಮ ಸಹಕಾರಿಯು... ಬಂಡವಾಳೇತರ ವ್ಯವಹಾರಗಳನ್ನು ನಡೆಸುತ್ತಿದೆಯೇ...?
- ನಿಮ್ಮ ಸಂಸ್ಥೆ... ಲಾಭ ಗಳಿಸಲೇಬೇಕು ಎಂಬುದನ್ನು ಒಪ್ಪುತ್ತೀರಾ...?
- ಈ ಕೆಳಗಿನ ಯಾವ ವರ್ಗದ ಸಾಲಗಾರರಿಗೆ ಆದ್ಯತೆ ನೀಡುತ್ತೀರಿ...?
- ಸಾಲ ಕಟ್ಟುವ ಶಕ್ತಿ ಮತ್ತು ಇಚ್ಛೆ – ಗುರುತಿಸಿ, ಗೌರವಿಸಿ ಎರಡೂ ಇವೆ
- ಸಾಲ ಪಾವತಿಸುವ ಇಚ್ಛೆ ಇದೆ – ರಾಜಿ ಒಪ್ಪಂದ ಶಕ್ತಿ ಇಲ್ಲ
- ಸಾಲ ಪಾವತಿಸುವ ಶಕ್ತಿ ಇದೆ – ಕಾನೂನು ಕ್ರಮ ಇಚ್ಛೆ ಇಲ್ಲ
- ಸಾಲ ಪಾವತಿಸುವ ಶಕ್ತಿಯೂ ಇಲ್ಲ – ವ್ಯವಹಾರ ನಿಲ್ಲಿಸಿ ಇಚ್ಛೆಯೂ ಇಲ್ಲ
- ತರಬೇತಿ – Investment – ಇದ್ದಂತೆ ಎಂಬುದನ್ನು ಒಪ್ಪುತ್ತೀರಾ...?

**ಸವಾಲುಗಳು...**

- ರಾಜ್ಯದಲ್ಲಿ... ಮೂರು ವರ್ಗದ ಸಹಕಾರಿಗಳು ಕೆಲಸ ಮಾಡುತ್ತಿವೆ.
- ಪ್ರಾರಂಭದ ಹಂತದಲ್ಲಿರುವ... ಸಹಕಾರಿಗಳು.
- ಪ್ರಾರಂಭವಾಗಿ 3 ವರ್ಷಕ್ಕೂ ಮೇಲ್ಪಟ್ಟ ಸಹಕಾರಿಗಳು.
- ಮಾದರಿ ಸಹಕಾರಿಗಳು. ಹೆಚ್ಚಿನ ಸಹಕಾರಿಗಳಲ್ಲಿ ವೃತ್ತಿಪರ ಆಡಳಿತದ ಕೊರತೆ ಕಂಡುಬರುತ್ತಿದೆ.
- ಸದಸ್ಯರ ಭಾಗವಹಿಸುವಿಕೆಯ ಕೊರತೆ
- ಐದು ವರ್ಷಗಳಲ್ಲಿ ಕನಿಷ್ಟ 2 ವರ್ಷ... ಸಹಕಾರಿಯ ಸೇವೆಗಳನ್ನು ಉಪಯೋಗಿಸಿಕೊಂಡರೆ ಸಾಕೆ...?
- ಸತತ 3 ವರ್ಷ ಮಹಾಸಭೆಗೆ ಹಾಜರಾದ ಮಾತ್ರಕ್ಕೆ... ಆತ ಪ್ರಜ್ಞಾವಂತ ಸದಸ್ಯನಾಗುತ್ತಾನಾ?
- ಮತದಾನದ ಹಕ್ಕುಳ್ಳ ಒಟ್ಟು ಸದಸ್ಯರ ಶೇ.10 ಅಥವಾ 1 ಸಾವಿರ ಯಾವುದು ಕಡಿಮೆಯೋ ಅಷ್ಟು ಸದಸ್ಯರ ಕೋರಂ... ಇದ್ದ ಮಾತ್ರಕ್ಕೆ ಎಲ್ಲ ಸದಸ್ಯರ ಕೊಡುಗೆ ಸಾಧ್ಯವೆ?

**ಇದರ ಬಗ್ಗೆ ಚಿಂತನೆ ಅಗತ್ಯ.**

Cooperative Governance... without member participation is an empty slogan.

- ಸಂಪನ್ಮೂಲದ ಕೊರತೆ
- ಕೇಂದ್ರ ಬಜೆಟ್ 2016–17: ಸರ್ಕಾರಿ ಬ್ಯಾಂಕ್‌ಗಳ ಪುನರುತ್ಥಾನಕ್ಕೆ ಬಂಡವಾಳದ ನೆರವು ನೀಡಲು ರೂ. 25 ಸಾವಿರ ಕೋಟಿ ಅನುದಾನ. ಅಗತ್ಯ ಬಿದ್ದರೆ ಇನ್ನೂ ಹೆಚ್ಚಿನ ಬಂಡವಾಳವನ್ನು ಒದಗಿಸುವುದು.
- ಸಾರ್ವಜನಿಕ ಬ್ಯಾಂಕುಗಳಲ್ಲಿ ರೂ. 1.94 ಲಕ್ಷ ಕೋಟಿ ಸಾಲ ಎನ್.ಪಿ.ಎ. ಆಗಿದ್ದರೂ... ಸರ್ಕಾರದಿಂದ ಆರ್ಥಿಕ ನೆರವು ದೊರೆಯುತ್ತದೆ. ಆದರೆ... ಸಹಕಾರ ಕ್ಷೇತ್ರಕ್ಕೆ...?
- ಪೂರಕ ಸಂಸ್ಥೆಗಳು ಮತ್ತು ಪಾಲುದಾರಿಕೆ

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ಕಲಂ 14 ಸಹಕಾರಿಯು ಯಾವುದೇ ಒಂದು ನಿರ್ದಿಷ್ಟ ವ್ಯವಹಾರವನ್ನು ನಡೆಸುವುದಕ್ಕಾಗಿ ಪಾಲುದಾರಿಕೆಯಲ್ಲಿ ಸೇರಿಕೊಳ್ಳಬಹುದು ಕಲಂ 15 ಸಹಕಾರಿಗಳ ಉದ್ದೇಶಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಪೂರಕ ಸಂಸ್ಥೆಗಳನ್ನು ಪ್ರಾರಂಭಿಸಬಹುದು.

ಉದಾ: ಕನ್ಸಾರ್ಟಿಯಂ ಫೈನಾನ್ಸ್

- ನಿಷ್ಠೆಯ ಕೊರತೆ : ಹೆಚ್ಚಿನ ಸಹಕಾರಿಗಳ ಆಡಳಿತದಲ್ಲಿ... ಬದ್ಧತೆ ಮತ್ತು ತಲ್ಲೀನತೆ ಕಂಡುಬರುತ್ತಿಲ್ಲ.

Trust Deficit, Ethical Degradation

ಆದರೆ... ಸವಾಲುಗಳನ್ನೇ... ಅವಕಾಶಗಳನ್ನಾಗಿ ಮಾಡಿಕೊಂಡು,

**ನಿಶ್ಚಿತ ಗುರಿ ಸಾಧಿಸುವುದೇ ನಾಯಕತ್ವದ ಲಕ್ಷಣ.**

ನಾಯಕತ್ವ ಎಂಬುದು ವೃತ್ತಿಯಲ್ಲ, ಅದು ಜೀವನ ಶೈಲಿ!

ಮೊದಲ ಸಾಲಿನಲ್ಲಿ ನಿಲ್ಲಲು... ಏನು ಮಾಡಬೇಕು? ಎಂಬುದನ್ನು... ಮನದಟ್ಟು ಮಾಡಿಸುವ ಕಲೆ

ನಾಯಕ ಎಂದರೆ ಯಾರು...?

- ನಾಯಕ ಜನರ ಗುಂಪಿನಿಂದಲೆ ಮೂಡಿ ಬರುತ್ತಾನೆ; ಜನರೊಂದಿಗೆ... ಕೆಲಸ ಮಾಡುತ್ತಾನೆ.
- ಆಯಸ್ಕಾಂತದಂತೆ ಜನರನ್ನು ಆಕರ್ಷಿಸಿ ಒಂದು ತಂಡವನ್ನು ಕಟ್ಟುತ್ತಾನೆ.
- ವೈಫಲ್ಯತೆಯ ಕಾಲದಲ್ಲಿ ಪ್ರೋತ್ಸಾಹ ನೀಡುತ್ತಾನೆ.
- ಇತರರು ತನಗೆ ಏನು ಮಾಡಬಲ್ಲರು ಎಂಬುದಕ್ಕಿಂತ... ತಾನು ಇತರರಿಗೆ ಏನು ಮಾಡಬಲ್ಲೆ? ಎಂದು ಯೋಚಿಸುತ್ತಾನೆ.

**ನಾಯಕತ್ವದ ಲಕ್ಷಣಗಳು**

- ಜ್ಞಾನ
- ತ್ಯಾಗ
- ಕರುಣೆ
- ಸಹೋದರತೆ
- ಎನಗಿಂತ ಕಿರಿಯರಿಲ್ಲ
- ನಾನು
- ಹೋದರೆ ಹೋದೇನು

- ಇಂದಿನ ದಿನವೇ... ಶುಭ ದಿನವು
- Work is worship
- ಶಿಕ್ಷಣದಿಂದ... ಪ್ರಗತಿ
- ಸಂಘಟನೆಯಿಂದ ಶಕ್ತಿ
- ಭಾಗ್ಯಶಿಲ್ಪಿ
- ಕನಸುಗಾರ
- ಹಸಿರು ಕ್ರಾಂತಿಯ ಪಿತಾಮಹ
- ಕ್ಷೀರ ಕ್ರಾಂತಿಯ ಪಿತಾಮಹ
- ಬದಲಾವಣೆಯ ಹರಿಕಾರ
- ಸಿನಿಮಾ ನನ್ನ ಉಸಿರು
- ಅಭಿಮಾನಿ ದೇವರುಗಳು
- ನಿಮಗೆ ಒಳ್ಳೆಯದಾಗಲಿ... ನಿಮ್ಮಿಂದಲೂ ಒಳ್ಳೆಯದಾಗಲಿ
- I dare... I can
- ದಂತಕತೆ
- ಸಾಲು ಮರದ
- ತಿಮ್ಮಕ್ಕ
- ಹೋಳಿಗೆ ಗೌರಮ್ಮ

**ಸಹಕಾರಿ ಕ್ಷೇತ್ರದಲ್ಲಿ... ನಾಯಕತ್ವದ ಕೊರತೆ ಇದೆ...!**

ಸಹಕಾರಿಯ ಅಧ್ಯಕ್ಷರಾದ ಮಾತ್ರಕ್ಕೆ ಅಥವಾ ನಿರ್ದೇಶಕರಾಗಿ ಚುನಾಯಿತರಾದ ಕೂಡಲೇ ನಾಯಕತ್ವ ಮೂಡಿಬರುವುದಿಲ್ಲ.

**ಸಹಕಾರಿ ನಾಯಕತ್ವದ ಹತ್ತು ಸೂತ್ರಗಳು**

- ಸಹಕಾರಿ ವ್ಯವಸ್ಥೆ... ಒಂದು ಆರ್ಥಿಕ ವ್ಯವಸ್ಥೆ. ಸಹಕಾರಿ ನಾಯಕ... ಈ ವ್ಯವಸ್ಥೆಯ ಮಾರ್ಗದರ್ಶಕನಾಗಿರಬೇಕು.
- ಸಂಸ್ಥೆಯು ಈಗ ಹೇಗಿದೆ, ಮುಂದೆ ಹೇಗಾಗಬೇಕು... ಎಂಬ ಬಗ್ಗೆ ಸ್ಪಷ್ಟವಾದ ಕಲ್ಪನೆಯನ್ನು ಸಹಕಾರಿ ನಾಯಕ ಹೊಂದಿರಬೇಕು. ಇದನ್ನು 'ವಿಷನ್' ಎನುತ್ತೇವೆ.
- ಸಹಕಾರಿ ನಾಯಕನಿಗೆ... ಸದಸ್ಯರ ಅಭಿವೃದ್ಧಿ ಮುಖ್ಯ ಧ್ಯೇಯವಾಗಬೇಕು. ಏಕೆಂದರೆ... ಸಮೂಹದ ಹಿತವನ್ನು ಬಯಸುವವನು... ನಿಜವಾದ ನಾಯಕ
- ಸಹಕಾರಿ ನಾಯಕ... ಸಹಕಾರಿ ತತ್ವಗಳು ಮತ್ತು ನಿಯಮಗಳಿಗೆ ಅನುಗುಣವಾಗಿ ಕೆಲಸ ಮಾಡಬೇಕು. ಇವುಗಳನ್ನು ಉಲ್ಲಂಘಿಸಿ ಕೆಲಸ ಮಾಡುವಂತಹ ಯಾವುದೇ ಒತ್ತಡಕ್ಕೆ ಮಣಿಯಬಾರದು. ನಿಯಮೋ ರಕ್ಷತಿ... ರಕ್ಷಿತಃ!
- ಸಹಕಾರಿ ನಾಯಕ... ಅಧ್ಯಯನಶೀಲನಾಗಿರಬೇಕು, ಬದಲಾವಣೆಗೆ ಹೊಂದಿಕೊಳ್ಳುವಂತವನಾಗಿರಬೇಕು, ತಾನೂ ಬೆಳೆಯುತ್ತಾ... ಎರಡನೇ ಸಾಲಿನ ನಾಯಕರನ್ನೂ ಬೆಳೆಸಬೇಕು.
- ಅಪ್‌ಡೇಟೆಡ್ ಆಗಬೇಕು... ಇಲ್ಲದಿದ್ದರೆ ಔಟ್‌ಡೇಟೆಡ್ ಆಗುತ್ತೀರಿ.
- ಸಹಕಾರಿ ನಾಯಕ... ಸಂಸ್ಥೆಯ ವ್ಯವಹಾರದಲ್ಲಿ ಪಾರದರ್ಶಕತೆ ಇರುವಂತೆ ನೋಡಿಕೊಳ್ಳಬೇಕು. ಪಾರದರ್ಶಕತೆ ಇದ್ದಲ್ಲಿ... ನಂಬಿಕೆ, ವಿಶ್ವಾಸ ಬೆಳೆಯುತ್ತದೆ.
- ಸಹಕಾರಿ ನಾಯಕ... ಎಲ್ಲರನ್ನೂ ಸಮಾನವಾಗಿ ಕಾಣಬೇಕು, ತಂಡ ಸ್ಫೂರ್ತಿಯನ್ನು ರೂಪಿಸಬೇಕು.
- ಸಹಕಾರಿ ನಾಯಕ... ಒಳ್ಳೆಯ ಕೇಳುಗನಾಗಿರಬೇಕು.
- ಸಹಕಾರಿ ನಾಯಕ... ಸ್ಥಿತಪ್ರಜ್ಞತೆಯಿಂದ ಕೂಡಿರಬೇಕು.
- ಸಹಕಾರಿ ನಾಯಕ... ಜನರನ್ನು ಮತ್ತು ಅವರ ಸ್ವಭಾವವನ್ನು ಚೆನ್ನಾಗಿ ಅರಿತುಕೊಂಡಿರಬೇಕು.
- ಸಮಸ್ಯೆಗಳು ಬಂದೊಡನೆ ಜಾಗ ಖಾಲಿ ಮಾಡುವುದು ಈ ಮನೋಭಾವದವರು ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅಸಮರ್ಥರಾಗಿರುತ್ತಾರೆ.

**ಸಹಕಾರಿ ನಾಯಕರೆ...**

- ನಿಮ್ಮ ನೌಕರರನ್ನು ಗುರುತಿಸಿ.
- ಅವರಿಗೆ ಸಾಕಷ್ಟು ಪ್ರೋತ್ಸಾಹ ನೀಡಿ.
- ಅಗತ್ಯವಾದ ತರಬೇತಿ ನೀಡಿ.
- ಅವರ ಅಭಿಪ್ರಾಯಗಳನ್ನು ಆಲಿಸಿ.
- ಯಶಸ್ಸನ್ನು ಅವರೊಂದಿಗೆ ಹಂಚಿಕೊಳ್ಳಿ.
- ಎಂಥ ಸವಾಲು ಎದುರಾದರೂ ಅದನ್ನು ಸ್ವೀಕರಿಸಲು, ರಿಸ್ಕ್‌ಗಳನ್ನು ತೆಗೆದುಕೊಳ್ಳಲು ಅವರಿಗೆ ಉತ್ತೇಜನ ನೀಡಿ.
- ಕೆಲಸ ಮಾಡುವ ಸ್ವಾತಂತ್ರ ನೀಡಿ, ಅವರ ಸಾಮರ್ಥ್ಯದ ಮೇಲೆ ನೀವು ಇಟ್ಟಿರುವ ನಂಬಿಕೆಯನ್ನು ತೋರ್ಪಡಿಸಿ. ಏಕೆಂದರೆ.. ನಿಮ್ಮ ನೌಕರರು.. ನಿಮ್ಮ ಸಂಸ್ಥೆಯ ಆಂತರಿಕ ಗ್ರಾಹಕರು! ಮರೆಯದಿರಿ...
- ನಿಮ್ಮ ಪ್ರತಿಯೊಂದು ಹೆಜ್ಜೆಯನ್ನು ಗಮನಿಸುವವರಿದ್ದಾರೆ.
- ಪ್ರಶ್ನಿಸುವವರಿದ್ದಾರೆ... ಟೀಕಿಸುವವರಿದ್ದಾರೆ ದೂರುವವರಿದ್ದಾರೆ.
- ಇವುಗಳ ಜೊತೆಗೆ ಪ್ರೋತ್ಸಾಹಿಸುವವರಿದ್ದಾರೆ, ಆದರಿಸುವವರೂ ಇದ್ದಾರೆ.
- ಆದ್ದರಿಂದ, ವ್ಯವಸ್ಥೆಯನ್ನು ಸರಿಪಡಿಸುವ-ಸುಧಾರಿಸುವ-ಉನ್ನತ ಮಟ್ಟಕ್ಕೇರಿಸುವ ಅನುಕರಣೀಯ ಕ್ರಮಗಳ ಬಗ್ಗೆ ಚಿಂತನೆ ಇರಲಿ.
- ನಿಮ್ಮ ಕೆಲಸವನ್ನು... ಸೇವೆಯೆಂದು ಪರಿಗಣಿಸಿ.
- ಅದು ಉತ್ತಮ ಗುಣಮಟ್ಟದ ಸೇವೆಯಾಗಲಿ!

ನೆನಪಿಡಿ: ನಿಮ್ಮ ಮುಖವನ್ನು ಸೂರ್ಯನ ಕಡೆ ತಿರುಗಿಸಿದರೆ.... ನೆರಳು ನಿಮ್ಮ ಹಿಂದೆ ಬೀಳುತ್ತದೆ. ಸೇವೆಯ ಕಡೆಗೆ ತಿರುಗಿಸಿದರೆ.... ನಿಮ್ಮ ಹೆಸರು ಶಾಶ್ವತವಾಗಿ ಉಳಿಯುತ್ತದೆ.



# Reserve Bank of India News – April 2016

**K. Vittal Shetty,** kohimavittal@hotmail.com. Mobile : 9845699904

First Bi-monthly Monetary Policy Statement, 2016-17 announced by Dr. Raghuram G. Rajan, Governor Reserve Bank of India on 5th April 2016.

**Monetary and Liquidity Measures**

**On the basis of an assessment of the current and evolving macroeconomic situation, it has been decided to:**

- reduce the policy repo rate under the liquidity adjustment facility (LAF) by 25 basis points from 6.75 per cent to 6.5 per cent;
- reduce the minimum daily maintenance of the cash reserve ratio (CRR) from 95 per cent of the requirement to 90 per cent with effect from the fortnight beginning April 16, 2016, while keeping the CRR unchanged at 4.0 per cent of net demand and time liabilities (NDTL);
- continue to provide liquidity as required but progressively lower the average ex ante liquidity deficit in the system from one per cent of NDTL to a position closer to neutrality; and
- narrow the policy rate corridor from +/-100 basis points (bps) to +/- 50 bps by reducing the MSF rate by 75 basis points and increasing the reverse repo rate by 25 basis points, with a view to ensuring finer alignment of the weighted average call rate (WACR) with the repo rate;

Consequently, the reverse repo rate under the LAF stands adjusted to 6.0 per cent, and the marginal standing facility (MSF) rate to 7.0 per cent. The Bank Rate which is aligned to the MSF rate also stands adjusted to 7.0 per cent.

The second bi-monthly monetary policy statement will be announced on June 7, 2016; the third bi-monthly monetary policy statement on August 9, 2016; the fourth bi-monthly monetary policy statement on October 4, 2016; the fifth bi-monthly monetary policy statement on December 6, 2016; and the sixth bi-monthly monetary policy statement on February 7, 2017.

Date : Apr 27, 2016

Scheduled Bank's Statement of Position in India as on Friday, April 15, 2016

| **Policy Rates with effect from 05 April 2016.** | % |
|---|---|
| POLICY REPO RATE | 6.50% |
| REVERSE REPO RATE | 6.00% |
| MARGINAL STANDING FACILITY RATE | 7.00% |
| BANK RATE | 7.00% |
| **Reserve Ratios** | % |
| Cash Reserve Ratio | 4% |
| Statutory Reserve Ratio Effective April 2,.2016 | 21.25 % |

| (Amount in Billions of □) | | | | | | | |
|---|---|---|---|---|---|---|---|
| | | SCHEDULED COMMERCIAL BANKS (Including RRBs) | | | ALL SCHEDULED BANKS | | |
| | | 17-APR-2015 | 01-APR-2016 * | **15-APR-2016 *** | 17-APR-2015 | 01-APR-2016 * | **15-APR-2016 *** |
| I | a) Deposits (other than from banks) | 86690.17 | 97208.22 | **95462.4** | 89046.59 | 99799.31 | **98041.52** |
| | i) Demand | 7946.61 | 10832.36 | **9157.43** | 8138.66 | 11054.81 | **9375.16** |
| | ii) Time | 78743.57 | 86375.86 | **86305.01** | 80907.93 | 88744.5 | **88666.41** |
| II | INVESTMENTS (At book value) | 25647.81 | 25953.33 | **27411.43** | 26345.88 | 26710.22 | **28165.72** |
| III | BANK CREDIT (Excluding Inter Bank Advance) | 65751.99 | 75300 | **72596.76** | 67785.44 | 77575.99 | **74824.46** |

## I. IMPORTANT NEWS

**April 13, 2016 :** Scheme for providing Financial Assistance to Urban Cooperative Banks for Implementation of Core Banking Solution

As announced in the First Bi-monthly Monetary Policy Statement-2016-17 dated April 05, 2016, it has been decided to prescribe standards and benchmarks for CBS in UCBs and provide financial assistance and technology support through Institute for Development and Research in Banking Technology (IDRBT) to those UCBs who have partially implemented CBS or are yet to implement CBS.

As part of the Memorandum of Understanding with the State Governments/Central Government on Urban Cooperative Banks (UCBs), Reserve Bank had agreed to provide IT support to the UCBs. With the objective of ensuring implementation of standardized CBS in UCBs, it has been decided to prescribe standards and benchmarks for CBS in UCBs and provide technical support to UCBs through Institute for Development and Research in Banking Technology (IDRBT).

A scheme for providing financial assistance to UCBs for implementation of CBS has been formulated in consultation with IDRBT and would be implemented by IDRBT/Indian Financial Technology and Allied Services (IFTAS) (a subsidiary of IDRBT). The initial set up cost of 4 lakh will be paid by Reserve Bank of India to IFTAS. Thereafter, the recurring cost of 15,000 per branch per month will be borne by the UCB. The details of the scheme for providing financial assistance to UCBs for implementation of CBS are given in the Annex.

UCBs not operating under directions u/s 35A of the BR Act, 1949 (AACS) and which have not implemented/partially implemented CBS will be eligible for financial assistance under the scheme. Such UCBs may approach IDRBT/IFTAS for availing benefits under the scheme.

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 24

## Annex

Scheme for Providing Financial Assistance to Urban Cooperative Banks for implementation of Core Banking Solution

As a part of the Memorandum of Understanding with the State Governments on Urban Cooperative Banks (UCBs), the Reserve Bank agreed to provide IT support to the UCBs. In pursuance of this, the Reserve Bank facilitated submission of off-site surveillance data on line by the UCBs by providing necessary technical support and training to the staff of the UCBs. In furtherance of the larger objective of improving IT enabled operations of the UCBs, it has been decided to prescribe benchmarks and standards for CBS in UCBs and provide technical support to the UCBs through Institute for Development and Research in Banking Technology (IDRBT) for implementing Core Banking Solution (CBS) in UCBs that do not have CBS and reimburse the related cost to IDRBT.

1. Eligibility : UCBs which have not yet implemented CBS or partially implemented CBS will be eligible for financial assistance under the scheme. UCBs which are under directions imposed under Section 35A of Banking Regulation Act, 1949 (AACS) will not be eligible.
2. **Implementing Agency :** IDRBT will be the implementing agency for implementation of CBS in eligible UCBs, herein after called the Implementing Agency (IA).
3. **Steps involved in Implementation**

i. Eligible UCBs may approach IDRBT for implementation of CBS. A Non-disclosure Agreement (NDA) would be executed between the Urban Cooperative Bank and the IA which would contain all the information necessary to start the process.

ii. A preliminary study of the status of CBS existing in the bank or other banking solution currently available in the bank would be undertaken by IA to understand the existing set-up and, if necessary, recommend changes to local desktop environment. The entire data of the bank would be run through migration tools to confirm integrity.

iii. Data would be validated and corrected by IA to be in readiness for porting to the new CBS environment.

iv. Training for the staff who will be handling the project would be provided by IA.

v. User Acceptance Test (UAT) will be conducted and thereafter data will be migrated to the new application.

vi. While implementing CBS the existing desktop environment will be hardened by denying access to USB / mass storage devices and preventing installation of unauthorised programs on the computer.

vii. The teams implementing the migration will train the staff of UCB to get familiarised with the operations.

4. **Services provided by IA :** The migration to CBS will be designed, developed and supplied by IA. The maintenance thereafter and change requests will be handled by IA.
5. **Cost of package :** The cost of the migration to CBS for a bank will be 4/- lakhs. Thereafter, the recurring cost will be 15,000/- per branch per month and the cost also includes redundant net work connectivity. The recurring cost would be subject to review from time to time.
6. **Quantum of Financial Assistant from Reserve Bank of India :** Reserve Bank of India will reimburse the cost of migration of the UCBs to CBS amounting to 4/- lakhs to IA on successful completion of preliminary study and data validation. The recurring cost of 15,000/- per branch per month will be borne by the UCB.

**II.Cancellation, Withdrawl, Penalties and Directions on Urban Co-operative Banks**

**Apr 04, 2016 :** RBI extends validity of the Directions issued to the Mercantile Urban Co-operative Bank Ltd., Meerut, Uttar Pradesh.

**Apr 05, 2016 :** RBI extends Directions issued to the Brahmawart Commercial Co-operative Bank Ltd., Kanpur, Uttar Pradesh till July 06, 2016.

**Apr 06, 2016 :** RBI imposed a monetory penalty of 2.00 lakh (Two lakh only) penalises The Panihati Co-operative Bank Ltd.,Dist- 24-Parganas (N), West Bengal.

**Apr 07, 2016 :** RBI has imposed a monetary penalty of 1.00 lakh (One lakh only) on the Dholpur Urban Co-operative Bank Ltd., Dholpur.

**Apr 12, 2016 :** RBI issues Directions to Gokul Co-operative Urban Bank Ltd., Secunderabad (Telangana)from the close of business on April 04, 2016.

**Apr 12, 2016 :** Directions under Section 35A of the Banking Regulation Act, 1949 (AACS)- United India Co-operative Bank Ltd., Nagina, Bijnor, Uttar Pradesh.

**Apr 13, 2016 :** Directions under Section 35A of the Banking Regulation Act, 1949 (AACS) – Jamkhed Merchants Co-operative Bank Ltd., Jamkhed, Ahmednagar, Maharashtra.

**Apr 18, 2016 :** RBI extends Directions issued to the HCBL Co-operative Bank Ltd., Lucknow, Uttar Pradesh till October 15, 2016

**Apr 25, 2016 :** The Reserve Bank of India has imposed a monetary penalty of 1.00 lakh (Rupees One Lakh only) on The Dhrangadhra Peoples' Co-operative Bank Ltd., Dist. Surendranagar, Gujarat.

**Apr 28, 2016 :** The Reserve Bank of India has imposed a monetary penalty of 5,00,000/- (Rupees Five lakh only) Magadh Central Co-operative Bank Ltd., Gaya.

Source: www.rbi.org.in

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು.560 010. ದೂ: 080 – 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ : 0821 – 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂ : 0831 – 2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ – 585102. ದೂ. 08472 – 270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010